THE KARNATAKA LAND REVENUE (AMENDMENT) BILL, 1982, (Will Continued)

ಶ್ರೀ ವೈ. ರಾಮಕೃಷ್ಣ.—ಪಟ್ಟಾ ಪುಸ್ತಕಗಳನ್ನು ರೈತರಿಗೆ ಹಂಚುವ ವಿಚಾರ.

ಶ್ರೀ ಎ. ಲಕ್ಷ್ಮಿಸಾಗರ್.—ಸ್ವಾಮಿ, ಅಧ್ಯಕ್ಷರೆ, ಈ ಮಸೂದೆಗೆ ಸಂಬಂಧಪಟ್ಟಂತೆ ಮಾತನಾಡ ಬೇಕಾದರೆ ಈ ಖಾತೆಯನ್ನು ಹೊಂದಿರತಕ್ಕ ಸಚಿವರೇ ಇಲ್ಲ. ಇದರ ಬಗ್ಗೆ ನಮಗೆ ಸ್ವಲ್ಪ ವಿವರಣೆ ಯನ್ನು ಕೊಡಬೇಕು.

ಶ್ರೀ ವೈ. ರಾಮಕೃಷ್ಣ.—ಈಗಾಗಲೇ ವಿವರಣೆಯನ್ನು ಕೊಟ್ಟಿದ್ದೇವೆ.

ಡಾ. ಎಚ್. ಎಲ್. ತಿಮ್ಮೇಗೌಡ.—ಸ್ವಾಮಿ, ರೈತರು ಸಾಲ ತೆಗೆದುಕೊಳ್ಳುವುದಕ್ಕೆ ಅನುಕೂಲ ವಾಗಲಂ ಆ ರೈತರ ಜಮೀನಿನ ವಿವರಗಳನ್ನು ಒಳಗೊಂಡಂತೆ ಪಟ್ಟಾ ಪುಸ್ತಕಗಳನ್ನು ಕೊಡುವುದಕ್ಕೆ ಸಂಬಂಧಪಟ್ಟ ಮಸೂದೆಯನ್ನು ಈ ಸಭೆಯ ಮುಂದಿಟ್ಟಿದ್ದೀರಿ. ಹಿಂದೆ ಬೆಳೆಗಳ ಮೇಲೆ ಲೆವಿ ಹಾಕಿದಾಗ ಪರ್ಮಿಷನ್ ಬೇಕಾದರೆ ರೈತರು ಅರ್ಜಿ ಕೊಟ್ಟರೆ ಅವರ ಮನೆಯ ಬಾಗಿಲಿಗೇ ಪರ್ಮಿಷನ್ ಕಳುಹಿಸಿಕೊಡುವ ವ್ಯವಸ್ಥೆ ಮಾಡುತ್ತೇವೆಂದು ಹೇಳಿದ್ದಿರಿ. ಅದರ ಪ್ರಕಾರ ನಾನೇ ಒಂದು ಸಾರಿ ಭತ್ತವನ್ನು ಮಿಲ್‌ಗೆ ಹಾಕಿಸುವುದಕ್ಕೆ ಪರ್ಮಿಷನ್ ಬೇಕೆಂದು ಅರ್ಜಿ ಕೊಟ್ಟೆ. ೩ ತಿಂಗಳು ಆದರೂ ನನಗೆ ಪರ್ಮಿಷನ್ ಬರಲಿಲ್ಲ. ಆಗ ಕೊನೆಗೆ ನಾನೇ ಹೋಗಿ ಪರ್ಮಿಟ್ ತರಬೇಕಾಯಿತು. ಇದೂ ಆ ರೀತಿ ಆಗಬಾರದು. ಈ ಪಟ್ಟಾ ಪುಸ್ತಕದಲ್ಲಿ ರೈತ ಸಾಲ ತೆಗೆದುಕೊಂಡ ಬಗ್ಗೆ ವಿವರ, ರೆವಿನ್ಯೂ ಕಂದಾಯ ಎಷ್ಟು ಬಾಕಿ ಇದೆ, ಇನ್ನೂ ಮುಂತಾದ ವಿವರಗಳೆಲ್ಲಾ ಇರುತ್ತವೆಂದು ತಾವು ಹೇಳುತ್ತಿದ್ದೀರಿ. ಅದು ಒಳ್ಳೆಯದು. ಆದರೆ ಅದಂ ಕೇವಲ ಪುಸ್ತಕದಲ್ಲೇ ಉಳಿದುಕೊಳ್ಳದೇ ಕಾರ್ಯಗತ ಆಗಬೇಕು. ಇದಂ ಕಾರ್ಯಗತವಾದರೆ ತಮ್ಮ ಉದ್ದೇಶದ ಪ್ರಕಾರ ರೈತರಿಗೆ ಬಹಳ ಉಪಯೋಗವಾಗಂತ್ತದೆ. ಇದು ಪ್ರತಿಯೊಬ ರೈತರಿಗೂ ಸಂಬಂಧಪಟ್ಟ ವಿಲೇಜ್ ಅಕೌಂಟೆಂಟ್‌ಗಳ ಮೂಲಕ ತಲುಪುವಂತೆ ಮಾಡಬೇಕು. ಇಲ್ಲದಿದ್ದರೆ ತಾವು ಈ ಮಸೂದೆಯನ್ನು ಜಾರಿಗೆ ತಂದರೆ ಅದರಿಂದ ಏನೂ ಪ್ರಯೋಜನ ವಾಗುವುದಿಲ್ಲ ಎನ್ನುವ ಮಾತನ್ನು ಹೇಳಿ ಈ ಮಸೂದೆಯನ್ನು ಅಂಗೀಕರಿಸಬಹುದೆಂದು ಹೇಳ ಬಯಸುತ್ತೇನೆ.

ಶ್ರೀ ಎಚ್. ಗಂಗಾಧರನ್ (ಚಾಮರಾಜ).—ಸನ್ಮಾನ್ಯ ಅಧ್ಯಕ್ಷರೆ, ಇವತ್ತು ಸರ್ಕಾರದವರಂ ಸಭೆಯಮುಂದೆ ತಂದಿರತಕ್ಕ ಈ ಮಸೂದೆ ಬಹಳ ಸ್ವಾಗತಾರ್ಹವಾದುದು. ಆದರೆ ಇದು ಕಾರ್ಯಗತ ವಾಗುವುದು ಬಹಳ ಮುಖ್ಯವಾದುದು. ಇಲ್ಲಿ ನನ್ನ ಸಲಹೆ ಏನೆಂದರೆ ಇದರಲ್ಲಿ ಪಹಣಿ, ಕಲ್ಟಿವೇಷನ್...

ಅಧ್ಯಕ್ಷರು.—ಅದೆಲ್ಲಾ ಇದರಲ್ಲೇ ಇದೆ.

"...and the information as respects the cultivation of the land and the areas of crops sown in it as shown in the Village records...".

SRI H. GANGADHARAN.—If the owner is cultivating, his name should be there.

SRI Y. RAMAKRISHNA.—There is there in Sec. 129 A.

ಶ್ರೀ ಎಚ್. ಗಂಗಾಧರನ್.—ರೈತರ ಜಮೀನು ಯಾವುದೇ ಸೊಸೈಟಿಗಾಗಲಿ, ಬ್ಯಾಂಕಿಗೇ ಆಗಲಿ, ಅಥವಾ ಸರ್ಕಾರಕ್ಕೇ ಆಗಲಿ ಮಾರ್ಟ್‌ಗೇಜ್ ಆಗಿದ್ದರೆ ಅದು ಈ ಪಟ್ಟಾ ಪುಸ್ತಕದಲ್ಲಿ ನಮೂದಾಗಿರ ಬೇಕು, ಆ ಜಮೀನಿನ ಬೆಲೆ ಎಷ್ಟು ಎಂಬುದು ಅದರಲಿ ನಮೂದಾಗಿರಬೇಕು, ಎಷ್ಟು ಸೆಸ್ ಹಾಕ ಲಾಗಿರುತ್ತದೆ ಎಂಬುದೂ ನಮೂದಾಗಿರಬೇಕು. ಏಕೆಂದರೆ ಕೆಲವು ಸಂದರ್ಭದಲ್ಲಿ ಈ ಸೆಸ್ ವ್ಯತ್ಯಾಸ ವಾಗಿರುತ್ತದೆ. ಇನ್ನೂ ಮುಂತಾದುವನ್ನು ತಾವು ರೂಲ್ಸ್ ಮಾಡುವಾಗ ಅಳವಡಿಸಬೇಕು. How much tax he is liable to pay and what are the Cess and how much it is to be? ಎಲ್ಲಾ ಅದರಲ್ಲಿರಬೇಕು. ಎಲ್ಲಕ್ಕಿಂತಲೂ ಮುಖ್ಯವಾಗಿ ಹೇಳುಪುದಾದರೆ

ಐಡೆಂಟಿಟಿ ಕಾರ್ಡ್‌ನಲ್ಲಿ ಆ ಜಮೀನಿನ ರೈತನ ಫೋಟೋ ಇರುವಂತೆ ಮಾಡಬೇಕು. ಈ ಮೂರೂ ವಿಷಯಗಳು ತಮ್ಮ ಪಟ್ಟಾ ಪುಸ್ತಕದಲ್ಲಿ ಇರುವಂತೆ ಮಾಡಬೇಕೆಂದು ಹೇಳಿ ಈ ಬಿಲ್ಲನ್ನು ಸ್ವಾಗತಿಸುತ್ತೇನೆ.

ಶ್ರೀ ಎಂ. ಮಲ್ಲಪ್ಪ (ಬಿರೂರು).—ಸನ್ಮಾನ್ಯ ಸಭಾಧ್ಯಕ್ಷರೆ, ಈಗ ಸಭೆಯ ಮುಂದೆ ತಂದಿರತಕ್ಕ ಬಿಲ್ಲನ್ನು ನಾನು ಸಂಪೂರ್ಣವಾಗಿ ಸ್ವಾಗತಿಸುತ್ತಾ ಇದರಿಂದ ರೈತರಿಗೆ ಬಹಳ ಅನುಕೂಲವಾದೀತೆಂದು ನಾನು ಹೇಳುವುದಕ್ಕೆ ಇಷ್ಟಪಡುತ್ತೇನೆ. ಯಾರೇ ಒಬ್ಬ ರೈತ ತನ್ನ ಜಮೀನಿಗೆ ಸಂಬಂಧಪಟ್ಟಂತೆ ಹಕ್ಕು ಪತ್ರವನ್ನು ತೆಗೆದುಕೊಳ್ಳಬೇಕಾದರೂ ಬಹಳ ಶ್ರಮಪಡಬೇಕಾಗಿದೆ. ಇದನ್ನು ತಪ್ಪಿಸುವ ಉದ್ದೇಶದಿಂದ ಸರ್ಕಾರದವರು ಪಟ್ಟಾ ಪುಸ್ತಕಗಳನ್ನು ಕೊಡುವ ವ್ಯವಸ್ಥೆ ಮಾಡುತ್ತಿರುವುದು ನಿಜಕ್ಕೂ ಸ್ವಾಗತಾರ್ಹ ವಿಷಯ. ಆದರೆ ಇದು ಕೇವಲ ಪೇಪರ್ ಮೇಲೆಯೇ ಉಳಿದುಕೂಳ್ಳದೆ ಕಾರ್ಯಗತ ವಾಗಬೇಕು. ಈಗಾಗಲೇ ಮಾತನಾಡಿದ ಮಾನ್ಯ ಸದಸ್ಯರು ಹೇಳಿದಂತೆ ಆ ಪಟ್ಟಾ ಪುಸ್ತಕದಲ್ಲಿ ಆ ರೈತನ ಜಮೀನಿಗೆ ಸಂಬಂಧಪಟ್ಟ ಕಂದಾಯ, ಸೆಸ್ಸು, ಅದನ್ನು ಯಾರು ಮಾಡುತ್ತಿದ್ದಾರೆ, ಆದರ ಬಗ್ಗೆ ಪಹಣಿ, ಹಕ್ಕುಪತ್ರ ಯಾಗ ಹೆಸರಿನಲ್ಲಿದೆ ಇನ್ನೂ ಮುಂತಾದ ವಿಷಯಗಳು ಆದರಲ್ಲಿ ನಮೂದಾ ಗಿರಬೇಕು.

ಹಾಗೆ ಮಾಡುವುದರಿಂದ ರೈತರಿಗೆ ಬಹಳ ಒಳ್ಳೆಯದಾಗುತ್ತದೆ. ಅವನು ಯಾವುದೇ ಬ್ಯಾಂಕಿನಲ್ಲಿ ಯಾಗಲಿ ಅಥವಾ ಯಾವುದೇ ಸಂಘ ಸಂಸ್ಥೆಗಳಿಗೆ ಹೋಗಿ ಹಾಜರು ಮಾಡಿದಾಗ ಅವನಿಗೆ ಪಟ್ಟಾಪುಸ್ತಕದ ಮೇಲೆ ಸಾಲ ವಗೈರೆ ಸಿಕ್ಕುವ ರೀತಿಯಲ್ಲಿ ಸರ್ಕಾರದವರು ವ್ಯವಸ್ಥೆ ಮಾಡಬೇಕೆಂದು ಈ ಸಂದರ್ಭದಲ್ಲಿ ಸಲಹೆ ಮಾಡುತ್ತೇನೆ. ಮತ್ತೆ ಈ ಸಂದರ್ಭದಲ್ಲಿ ಈ ಬಿಲ್ಲನ್ನು ಸ್ವಾಗತ ಮಾಡುತ್ತಾ ಈ ಬಿಲ್ಲು ಪೇಪರ್ ಬಿಲ್ಲಾಗಿ ಉಳಿದುಕೊಳ್ಳದೆ, ರೈತರಿಗೆ ಅನುಕೂಲವಾಗುವಂತೆ ಮಾಡಬೇಕೆಂದು ಹೇಳಿ ಸರ್ಕಾರದ ಯೋಜನೆ ಏನು ಇದೆಯೋ ಆ ಯೋಜನೆ ಸಫಲಗೊಳ್ಳಲಿ ಎಂದು ಹೇಳುತ್ತಾ ಈ ಬಿಲ್ಲನ್ನು ಸ್ವಾಗತ ಮಾಡುತ್ತೇನೆ.

ಶ್ರೀ ಬಿ. ವಿ. ಕಕ್ಕಿಲಾಯ.—ಮಾನ್ಯ ಅಧ್ಯಕ್ಷರೇ ನಾನೂ ಕೂಡ ಈ ಮಸೂದೆಯನ್ನು ಸ್ವಾಗತ ಮಾಡುತ್ತೇನೆ. ಆದರೆ ಇದರಲ್ಲಿ ಒಂದೆರಡು ವಿಷಯಗಳನ್ನು ತಾವು ಯೋಚನೆ ಮಾಡಬೇಕು. ತಿದ್ದು ಪಡಿ ಮಾಡಲಿಕ್ಕೆ ಸಾಧ್ಯವಾದರೆ ಮಾಡಬೇಕೆಂದು ತಮ್ಮ ಗಮನಕ್ಕೆ ತರಬಯಸುತ್ತೇನೆ. ೨ನೇ ಕ್ಲಾಸ್‌ನಲ್ಲಿ ಹೊಸ ಕ್ಲಾಸ್‌ನ್ನು ಇನ್‌ಸರ್ಟ್ ಮಾಡಬೇಕೆಂದು ಹೇಳಿದ್ದಾರೆ. ಇದರಲ್ಲಿ ೧೨ ''ಎ'' ಪಟ್ಟಾಪುಸ್ತಕ

> ''Every holder of agricultural land (including a tenant if he is primarily liable to pay land revenue therefor), shall be supplied by the prescribed officer with a patta book containing a copy of the record of rights pertaining to such land.''

ಎಂದು ಇದೆ. ಇದರಲ್ಲಿ ಒಂದೆರಡು ವಿಷಯಗಳು ಅನುಮಾನಕ್ಕೆ ಕಾರಣವಾಗಿರುತ್ತವೆ. ಅದರ ಬಗ್ಗೆ ತಾವು ಯೋಚನೆ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ. ಒಂದು ಏನೆಂದರೆ

> tenant liable to pay land revenue.

ಎಂದು ಹೇಳಿದರೆ ಈಗ ಲ್ಯಾಂಡ್ ರಿಫಾರಮ್ ಆಕ್ಟ್ ಪ್ರಕಾರ ಎಲ್ಲರಿಗೂ ಕೂಡ ಪಟ್ಟಾ ಕೊಡಬೇಕಾದು ಅವಶ್ಯಕತೆ ಇಲ್ಲ. ಕೆಲವುಕಡೆ ಹಿಡುವಳಿದಾರರಿಗೂ ಲ್ಯಾಂಡ್ ರೆಕಾರ್ಡ್ ಕೊಡಬೇಕಾದ ಅವಶ್ಯಕತೆ ಇಲ್ಲ ವೆಂದು ಸರ್ಕಾರದವರು ಮಾಡಿದ್ದಾರೆ. ಹೀಗಿರುವಾಗ ಯಾರು ಮಿತಿಯ ಕೆಳಗಡೆ ಇದ್ದಾರೋ ಅಂಥ ವರಿಗೆ ಇದನ್ನು ಕೊಡುವಂಥ ಅವಶ್ಯಕತೆ ಇಲ್ಲ ಎನ್ನುವ ಭಾವನೆ ಇದರಲ್ಲಿ ಬರುತ್ತದೆ.

> ''Every holder of agricultural land (including a tenant if he is primarily liable to pay land revenue therefor) ....''

ಅಂಥಮಾಡಿದ್ದಾರೆ, ಈವಾಗ ಲ್ಯಾಂಡ್ ರೆವಿನ್ಯೂವನ್ನೇ ಕೊಡುವಂಥ ಅವಶ್ಯಕತೆ ಇಲ್ಲದಂಥ ಮಟ್ಟದಲ್ಲಿ ಇರುವಂಥ ರೈತರಿಗೆ ಕಷ್ಟವಾಗಿರುತ್ತದೆ. ಅವರಿಗೆ ಪಟ್ಟಾ ಪುಸ್ತಕ ಸಿಕ್ಕುತ್ತದೋ ಇಲ್ಲವೋ ಎನ್ನುವ ಅನುಮಾನ ಬಂದಿರುತ್ತದೆ. ಈ ವಿಷಯದ ಬಗ್ಗೆ ಕ್ಲಾರಿಫೈ ಮಾಡಿದರೆ ಸಾಕೆಂದು ಹೇಳುತ್ತೇನೆ. ಸಿಕ್ಕ ದ್ದಾರೆ ಅಂಥವನಿಗೂ ಸಿಕ್ಕಬೇಕು ಲ್ಯಾಂಡ್ ರೆವಿನ್ಯೂ ಲಯಬಲ್ ಆಗಿದ್ದರೆ ಇರಲಿ ಇಲ್ಲದಿರಲಿ ಲ್ಯಾಂಡ್ ರೆವಿನ್ಯೂ ಕೊಡುವುದು ಅಗತ್ಯವಿಲ್ಲವೆಂದು ಹೇಳಿದ್ದಾರೆ.

ಶ್ರೀ ವೈ. ರಾಮಕೃಷ್ಣ.—ಈಗ ತಾವು ಹಕ್ಕಿನ ಬಗ್ಗೆ ಹೇಳುತ್ತಾ ಇದ್ದೀರಿ.

ಶ್ರೀ ಬಿ. ವಿ. ಕಕ್ಕಿಲಾಯ —ಕಂದಾಯ ಕೊಡಬೇಕಾದ್ದು ಪರಿಮಿತಿಯೊಳಗೆ ಇರಲಿ ಇಲ್ಲದೆ ಇರಲಿ ರೈಟ್ಸ್ ಬಗ್ಗೆ ಯಾವುದೇ ಒಂದು ವರ್ಗಕ್ಕೆ ಬದಲಾವಣೆ ಮಾಡಬೇಕಾದ ಅಗತ್ಯಬಂದರೆ ಅಂಥವರಿಗೂ ಸಿಕ್ಕತಕ್ಕಂಥ ಸಂದರ್ಭ ಬರಬೇಕು ಎನ್ನುವುದು ಒಂದು ಸಲಹೆ. ಎರಡನೆಯದೇನೆಂದರೆ ರೆಕಾರ್ಡ್ ಆಫ್ ರೈಟ್ಸ್ ಕೊಡುವಾಗ

> ".....shall be supplied by the prescribed officer with a patta book containing a copy of the record of rights pertaining to such land."

ಎಂದು ತಾವು ಹೇಳಿದ್ದೀರಿ. ಈವತ್ತು ವೈಶಮ್ಯ ಬರುತ್ತಿದೆ. ಕೆಲವು ಕಡೆಗಳಲ್ಲಿ ರೆಕಾರ್ಡ್ ಆಫ್ ರೈಟ್ಸ್ ಇನ್ನೂ ಕೂಡ ಪೂರ್ತಿಯಾಗಿಲ್ಲ. ರೆಕಾರ್ಡ್ ಆಫ್ ರೈಟ್ಸ್‌ನ ವಿವಾದಗಳಿಲ್ಲ ಮುಗಿದು ಕೊನೆಯ. ತೀರ್ಮಾನವಾಗಿ ರೆಕಾರ್ಡ್ ಆಫ್ ರೈಟ್ಸ್ ಎಲ್ಲ ಜಿಲ್ಲೆಗಳಲ್ಲೂ ಮತ್ತು ಎಲ್ಲ ತಾಲ್ಲೂಕ್‌ಗಳಲ್ಲಿ ಆಗಿಲ್ಲು ಅಂಥ ಕಡೆಗಳಲ್ಲಿ ಇದನ್ನು ಸೇರಿಸಿದರೆ ಇನ್ನೂ ಕೂಡ ವಿವಾದಕ್ಕೆ ಒಳಪಟ್ಟಿರತಕ್ಕಂಥ.....

ಅಧ್ಯಕ್ಷರು.—ರೆಕಾರ್ಡ್ ಆಫ್ ರೈಟ್ಸ್ ನಿಮ್ಮ ಜಿಲ್ಲೆಯಲ್ಲಿ ಮಾತ್ರ ಹೀಗೆ ಇರುತ್ತದೆ. ಹಳೆ ಮೈಸೂರಿನಲ್ಲಿ, ಮುಂಬೈ ಕರ್ನಾಟಕದಲ್ಲಿ, ಹೈದರಾಬಾದ್ ಕರ್ನಾಟಕದಲ್ಲಿ ರೆಕಾರ್ಡ್ ಆಫ್ ರೈಟ್ಸ್ ಈಗ ಹಾಲಿ ಇದೆ. ಅದು ಪೂರ್ತಿ ಮಾಡಿರುತ್ತಾರೋ ಇಲ್ಲವೋ ಎನ್ನುವುದು ಬೇರೆ ಪ್ರಶ್ನೆ. ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಮಾತ್ರ.....

ಶ್ರೀ ಬಿ. ವಿ. ಕಕ್ಕಿಲಾಯ.—ಈ ಮಸೂದೆಯಿಂದ ಎಲ್ಲರಿಗೂ ಬಾಧಕವಾಗುತ್ತದೆ. ಈ ಮಸೂದೆ ಜಾರಿಗೆ ಬಂದಾಗ ಇಡಿ ರಾಜ್ಯಕ್ಕೆ ಬಾಧಕವಾಗುತ್ತದೆ.

ಅಧ್ಯಕ್ಷರು.—ರೆಕಾರ್ಡ್ ಆಫ್ ರೈಟ್ಸ್ ಇದರಲ್ಲಿ ಲಗತ್ತಿಸಿದೆ ಎಂದು ಇದರಲ್ಲಿ ಇದೆ.

ಶ್ರೀ ಬಿ. ವಿ. ಕಕ್ಕಿಲಾಯ.—ಇದು ಮುಂದೆ ವಿವಾದಕ್ಕೆ ಆಸ್ಪದ ಕೊಡಬಾರದು ಎನ್ನುವುದೇ ನನ್ನ ವಾದ. ಅವರ ಕೈಯಲ್ಲಿ ಪಟ್ಟ ಕೊಟ್ಟರೆ ಮುಂದಿನ ವಾದ ವಿವಾದಗಳಿಗೆ ಕಾರಣವಾಗಬಹುದು.

ಅಧ್ಯಕ್ಷರು.—ತಮ್ಮ ಅಭಿಪ್ರಾಯ ಸ್ಪಷ್ಟವಾಗಿಲ್ಲ. ಈಗಾಗಲೇ ರೆಕಾರ್ಡ್ ಆಫ್ ರೈಟ್ಸ್‌ನಲ್ಲಿ ಯಾರು ಖಾತೆದಾರರು, ಯಾರಿಗೆ ಆಧಾರವಾಗಿರುತ್ತದೆ, ಯಾರಿಗೆ ಭೋಗ್ಯವಾಗಿರುತ್ತದೆ. ಯಾರಿಗೆ ಖರೀದಿಯಾಗಿರುತ್ತದೆ ಅದನ್ನೆಲ್ಲ ಪಟ್ಟಾ ಪುಸ್ತಕದಲ್ಲಿ ನಮೂದಿಸಿರುತ್ತದೆ. ಇದು ಅಲ್ಲದೆ ಜಮೀನಿನ ವಿಸ್ತೀರ್ಣವನ್ನೂ ಕೂಡ ನಮೂದಿಸಿರುತ್ತದೆ. ಆದರೆ ತಮ್ಮ ಜಿಲ್ಲೆಯಲ್ಲಿ ರೆಕಾರ್ಡ್ ಆಫ್ ರೈಟ್ಸ್ ವ್ಯವಸ್ಥೆ ಇಲ್ಲ. ಅದಕ್ಕೆ ಮಾನ್ಯ ಸಚಿವರಂ ಸ್ಪಷ್ಟವಾದ ಅಭಿಪ್ರಾಯವನ್ನು ಕೊಟ್ಟಿರುತ್ತಾರೆ.

ಶ್ರೀ ಬಿ. ವಿ. ಕಕ್ಕಿಲಾಯ.—ರೆಕಾರ್ಡ್ ಆಫ್ ರೈಟ್ಸ್‌ನಲ್ಲಿ ಯಾರು ಟೆನೆಂಟ್ ಇದ್ದಾರೆ, ಯಾರು ಲ್ಯಾಂಡ್ ಹೋಲ್ಡರ್ ಇದ್ದಾರೆಂದು ಕೆಲವು ಕಡೆಗಳಲ್ಲಿ ಸೇರಿಸಿದ್ದರೆ ಕೆಲವು ಕಡೆಗಳಲ್ಲಿ ಸಾಗುವಳಿದಾರರಿದ್ದರೂ ಟೆನೆಂಟ್ಸ್ ಇದ್ದರು ಕೂಡ ಸೇರಿಸಿಲ್ಲ. ಟ್ರಿಬ್ಯುನಲ್‌ನಲ್ಲಿ ಬಂದಿದೆ. ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಕೆಲವು ಸಂದರ್ಭಗಳಲ್ಲಿ ರೆಕಾರ್ಡ್ ಆಫ್ ರೈಟ್ಸ್ ಸರಿಯಾಗಿ ಇಲ್ಲ.

ಅಧ್ಯಕ್ಷರು.—ತಮ್ಮ ಜಿಲ್ಲೆಗೆ ಸಂಬಂಧಪಟ್ಟ ಹಾಗೆ ಸ್ಪಷ್ಟವಾಗಿ ಹೇಳಿದರೆ ಸರ್ಕಾರಕ್ಕೆ ಅನುಕೂಲವಾಗುತ್ತದೆ. ಬದಲಾವಣೆ ಮಾಡುವುದಕ್ಕೆ ಅನುಕೂಲವಾಗುತ್ತದೆ. ತಮ್ಮ ಅಭಿಪ್ರಾಯ ಜಾರಿಗೆ ಬರುವುದಕ್ಕೆ ಅನುಕೂಲವಾಗುತ್ತದೆ. ತಾವು ಹೇಳುವ ರೀತಿಯಲ್ಲಿ ಎಲ್ಲ ವಿಚಾರಗಳು ಎಲ್ಲರಿಗೂ ಗೊತ್ತಿದೆ ಎಂದು ತಿಳಿದುಕೊಳ್ಳಬೇಡಿ.

ಶ್ರೀ ಬಿ. ವಿ. ಕಕ್ಕಿಲಾಯ.—ತಾಲ್ಲೂಕು ಆಫೀಸುಗಳಲ್ಲಿ ಎರಡು ರೀತಿಯ ರಿಜಿಸ್ಟರ್ ಇಟ್ಟಿರುತ್ತಾರೆ, ಒಂದು ಕಲ್ಟಿವೇಷನ್ ರಿಜಿಸ್ಟರ್ ಇರುತ್ತದೆ. ವಿಲೇಜ್ ಅಕೌಂಟೆಂಟ್, ಗ್ರಾಮ ಲೆಕ್ಕಿಗ ಗ್ರಾಮಕ್ಕೆ ಹೋಗಿ ಜಮೀನು ಯಾವರೀತಿ ಇರಲಿ ಹಿಡುವಳಿ, ಮಾಲಿಕ ಯಾರು, ಯಾರು ವ್ಯವಸಾಯ ಮಾಡಿದ್ದಾರೆ, ಎಷ್ಟು ಲೆವಿ ಹೋಗುತ್ತಿದೆ ಲೆವಿ ಇಲ್ಲದಿದ್ದರೆ ಲೆವಿ ಇಲ್ಲ ಅದನ್ನು ಪ್ರತಿವರ್ಷ ಲೆಕ್ಕ ಬರೆದಿಟ್ಟಿದ್ದಾನೆ. ಒಂದೊಂದು ತಾಲ್ಲೂಕು ಆಫೀಸಿನಲ್ಲಿ ಇರುವ ರೆಕಾರ್ಡ್ ಆಫ್ ರೈಟ್ಸ್ ವಿರುದ್ಧವಾಗಿ

ಬರೆದಿಟ್ಟಿದ್ದಾರೆ. ಭೂ ನ್ಯಾಯ ಮಂಡಲಿಗಳಲ್ಲಿರತಕ್ಕಂಥ ರೆಕಾರ್ಡ್ ಆಫ್ ರೈಟ್ಸ್ ಬಗ್ಗೆ ನಂಬಿಕೆ ಇರುವುದಿಲ್ಲ. ಕೆಲವೊಂದು ಭೂ ನ್ಯಾಯ ಮಂಡಲಿಗಳಲ್ಲಿ ರೆಕಾರ್ಡ್ ಆಫ್ ರೈಟ್ಸನ್ನು ಟೆನೆಂಟ್ಸ್‌ಗೆ ಕೊಟ್ಟಿರುತ್ತಾರೆ.

ಅಧ್ಯಕ್ಷರು.—ಪಹಣಿಗೂ ರೆಕಾರ್ಡ್ ಆಫ್ ರೈಟ್ಸ್‌ಗೂ ವ್ಯತ್ಯಾಸವಿರುತ್ತದೆ.

ಶ್ರೀ ಬಿ. ವಿ. ಕಕ್ಕಿಲಾಯ.—ಪಹಣಿ ನೋಡಿ ಗೇಣಿದಾರನಿಗೆ ಟ್ರಿಬ್ಯೂನಲ್‌ನಲ್ಲಿ ಗೇಣಿ ಕೊಟ್ಟಿದ್ದರೆ ಮಾಲೀಕರು ಹೈಕೋರ್ಟಿಗೆ ರಿಟ್ ಹೋಗದೆ ಇರುವುದು ಇರುತ್ತದೆ. ಆದ್ದರಿಂದ ಏನಾಗುತ್ತದೆಂದರೆ ನಾವು ಇಂಥ ಸಂದರ್ಭದಲ್ಲಿ ರೆಕಾರ್ಡ್ ಆಫ್ ರೈಟ್ಸ್‌ನಲ್ಲಿ ಗುರುತಿಸಿದರೆ ಅದು ಸರಿಯಾದುದು ಎಂದು ಹೇಳುವುದಕ್ಕೆ ಏನು ದಾಖಲೆ, ಹೇಗೆ ನಂಬುವುದಕ್ಕೆ ಆಗುತ್ತದೆ.

ಅಧ್ಯಕ್ಷರು.—ನಮ್ಮಲ್ಲಿ ಇಲ್ಲವೆಂದು ಹೇಳುತ್ತೀರಾ.

ಶ್ರೀ ಬಿ. ವಿ. ಕಕ್ಕಿಲಾಯ.—ಅದುಬರಿಂದ ಸ್ವಲ್ಪ ರೆಕಾರ್ಡ್ ಆಫ್ ರೈಟ್ಸ್ ಉಂಟಾಗಿರತಕ್ಕಂಥ ಅನುಮಾನವನ್ನು ಪುನಃ ಪರಿಶೀಲನೆ ಮಾಡಬೇಕು. ಇಲ್ಲದಿದ್ದರೆ ರೆಕಾರ್ಡ್ ಆಫ್ ರೈಟ್ಸ್ ವಿವಾದಗಳು ಏನು ಇದೆ ಅದರಿಂದ ನಾಳೆ ತೊಂದರೆಯಾಗುತ್ತದೆ. ಇದನ್ನು ತಮ್ಮ ಗಮನಕ್ಕೆ ತರುತ್ತಿದ್ದೇನೆ.

ಅಧ್ಯಕ್ಷರು.—ಅಂದರೆ ರೆಕಾರ್ಡ್ ಆಫ್ ರೈಟ್ಸ್ ನಿಮ್ಮ ಜಿಲ್ಲೆಯಲ್ಲಿ ಇಲ್ಲವೇ ? ಆಕ್ಟ್ ಜಾರಿಯಲ್ಲಿ ಬಂದಿಲ್ಲವೇ ?

ಶ್ರೀ ವೈ. ರಾಮಕೃಷ್ಣ.—ಜಾರಿಯಲ್ಲಿಯೇ ಬಂದಿಲ್ಲವೆಂದು ಹೇಳುತ್ತೀರಾ ಅಥವಾ ಅಪ್ ಟು ಡೇಟ್ ಆಗಿ ಇಲ್ಲವೆಂದು ಹೇಳುತ್ತೀರಾ ?

ಅಧ್ಯಕ್ಷರು.—ಗೇಣಿದಾರರು ಯಾರೋ ಇರುತ್ತಾರೆ, ಇನ್ನೊಬ್ಬ ಸಾಗುವಳಿ ಮಾಡುತ್ತಿರುತ್ತಾನೆ, ಮೂಲ ಗೇಣಿದಾರ ಯಾರು ಇರುತ್ತಾನೆ ಅವನ ಹೆಸರು ಹೇಳುತ್ತಾರೆ ರೆಕಾರ್ಡ್ಸ್ ಆಫ್ ರೈಟ್ಸ್‌ನಲ್ಲಿ ಇರುತ್ತದೆ. ರೆಕಾರ್ಡ್ಸ್ ಆಫ್ ರೈಟ್ಸ್‌ನಲ್ಲಿ ಮೂಲ ಗೇಣಿದಾರನ ಹೆಸರು ಇರುತ್ತದೆ. ಭೂ ನ್ಯಾಯ ಮಂಡಳಿಯಲ್ಲಿ ತೀರ್ಮಾನ ಕೊಡುವಾಗ ಆತನ ಹೆಸರಿಗೆ ಹೋಗುತ್ತದೆ. ಸಾಗುವಳಿ ಮಾಡುವ ಗೇಣಿದಾರನಿಗೆ ಏನು ಸಿಗುವುದಿಲ್ಲ.

ಶ್ರೀ ಬಿ. ವಿ. ಕಕ್ಕಿಲಾಯ.—ಮೂಲ ಗೇಣಿದಾರನಿಗೆ ಪಟ್ಟ ಬರೆಯುವಾಗ ಆತನ ಹೆಸರಿಗೆ ಬರೆಯಬೇಕು. ಚಾಲು ಗೇಣಿದಾರನ ಹೆಸರು ಎಲ್ಲೂ ಇರುವುದಿಲ್ಲ. ಆತನ ಹೆಸರಿಗೆ ಪಹಣಿ ಕೂಡ ಇರುವುದಿಲ್ಲ. ರೆಕಾರ್ಡ್ಸ್ ಆಫ್ ರೈಟ್ಸ್‌ನಲ್ಲಿ ಮೂಲ ಗೇಣಿದಾರ ಎಂದು ನಮೂದು ಮಾಡಬೇಕು. ಈ ಕಾನೂನಿನಿಂದ ತೊಂದರೆ ಬರುತ್ತದೆ ಎನ್ನುವ ನನ್ನ ಪ್ರಶ್ನೆ ಇದರಲ್ಲಿ ಅಡಕವಾಗಿದೆ ಅದನ್ನು ಕೂಡ ಗಮನಿಸಬೇಕೆಂದು ತಮ್ಮಲ್ಲಿ ಕೇಳಿಕೊಳ್ಳುತ್ತೇನೆ. ಇನ್ನೊಂದು ವಿಚಾರವನ್ನು ತಮ್ಮಲ್ಲಿ ಹೇಳುತ್ತೇನೆ, ಇದರಲ್ಲಿ ಹೋಲ್ಡರ್ ಟೆನೆಂಟ್, ಚಾಲು ಗೇಣಿದಾರ ಹೋಲ್ಡರ್ ಟೆನೆಂಟ್‌ಗೆ ಮಧ್ಯದಲ್ಲಿ ಬೇರೆಯವರು ಬರುತ್ತಾರೆ. ಅವರಿಗೆ ರೈಟ್ಸ್ ಬರುತ್ತದೆ.

ಅಧ್ಯಕ್ಷರು.—ಹೇಗೆ ಬರುತ್ತದೆ ? ಹೋಲ್ಡರ್ ಅಂದರೆ ಖಾತೆದಾರ.

ಶ್ರೀ ಬಿ. ವಿ. ಕಕ್ಕಿಲಾಯ.—ಖಾತೆದಾರರು ಇದ್ದರೂ ವ್ಯವಸಾಯ ಮಾಡತಕ್ಕವರ ಮಧ್ಯದಲ್ಲಿ ಯಾರೂ ಮೂಲ ಗೇಣಿದಾರನಿದ್ದಾನೆ ಅವನು ಬರುತ್ತಾನೆ. ಸಬ್‌ಲೀಸ್ ಮುಖಾಂತರ ತಮ್ಮ ಆಕ್ಟ್‌ನಲ್ಲಿ ಇದೆ ಸಬ್ ಟೆನೆಂಟ್ ಆದರೂ ಅವನಿಗೆ ಒರಿಜಿನಲ್ ಬರುವುದಿಲ್ಲ.

ಅಧ್ಯಕ್ಷರು.—ತಾವು ಹೇಳುವ ಪ್ರಕಾರ ಮೂಲ ಗೇಣಿದಾರ ಬರಬೇಕು. ನಾನು ಅದಕ್ಕೆಹೇಳಿದ್ದು. ಅದನ್ನು ಸ್ಪಷ್ಟಪಡಿಸಬೇಕೆಂದು ಹೇಳುತ್ತಿದ್ದೇನೆ.

ಶ್ರೀ ಬಿ. ವಿ. ಕಕ್ಕಿಲಾಯ.—ನಾನು ವಕೀಲನಲ್ಲ.

ಅಧ್ಯಕ್ಷರು.—ಈ ಸಮಸ್ಯೆ ಇರುವುದು ನಿಮ್ಮ ಕಡೆ. ನಮ್ಮ ಕಡೆ ಯಾರು ಖಾತೆದಾರ ನಿರುತ್ತಾನೆ ಆತನೇ ಮೂಲ ಗೇಣಿದಾರನಿರುತ್ತಾನೆ. ತದನಂತರ ಸಾಗು ಇನ್ನೊಬ್ಬನದಾಗಿರಬಹುದು. ರೆಕಾರ್ಡ್ಸ್ ಆಫ್ ರೈಟ್ಸ್‌ನಲ್ಲಿ ಗೇಣಿದಾರನಿಗೆ ಬಂದಂತಹ ರೈಟ್ಸ್ ಅವನಿಗೂ ರೈಟ್ಸ್ ಬರುವ ಸಂಭವವುಂಟು. ಸಬ್ ಲೀಸ್ ಕೊಟ್ಟಾಗ ಬರುವ ವಾದ ವಿವಾದ ಬಗ್ಗೆ ಹೇಳುತ್ತೀರಿ.

ಶ್ರೀ ಬಿ. ವಿ. ಕಕ್ಕಿಲಾಯ.—ನಮ್ಮಲ್ಲಿ ಪಟ್ಟಾ ಕೊಡಬೇಕಾದರೆ ವಾದ ವಿವಾದಗಳು ಇವೆ. ಪಟ್ಟಾ ಪುಸ್ತಕ ಕೊಡುತ್ತೀರಿ ಅಂತಹವರಿಗೆ ರೆಕಾರ್ಡ್ಸ್ ಆಫ್ ರೈಟ್ಸ್ ವಾಸ್ತವಿಕವಾಗಿ ಇರುವುದಿಲ್ಲ. ನೀವು ಪಟ್ಟಾ ಕೊಟ್ಟರು ರೆಕಾರ್ಡ್ಸ್ ಆಫ್ ರೈಟ್ಸ್ ಇಲ್ಲದಿದ್ದರೆ ಅನುಕೂಲವಾಗುವುದಿಲ್ಲ. ಆತನ ಹೆಸರು ಎಲ್ಲೂ ನಮೂದಾಗಿರುವುದಿಲ್ಲ. ಇಂತಹ ತೊಂದರೆಗಳು ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಇದೆ. ಅದಕ್ಕೋಸ್ಕರ ಇದನ್ನು ಸ್ವಲ್ಪ ಗಮನಿಸಿ ಅದಕ್ಕೆ ತಿದ್ದುಪಡಿ ಮಾಡಿದರೆ ಅದು ಸೂಕ್ತವಾದುದಾಗುತ್ತದೆ. ಇದು ಬಹಳ ಒಳ್ಳೆಯ ಶಾಸನವಿದೆ ಅದಕ್ಕೆ ಮಾಡಬೇಕಾದ ತಿದ್ದುಪಡಿಯನ್ನು ಮಾಡಬೇಕೆಂದು ತಮ್ಮಲ್ಲಿ ಸಲಹೆ ಮಾಡಿ ಈ ಶಾಸನಕ್ಕೆ ಬೆಂಬಲ ಕೊಡುತ್ತೇನೆ.

ಶ್ರೀ ಎ. ಜಿ. ಕೊಡಗಿ.—ಮಾನ್ಯ ಸದಸ್ಯರಾದ ಕಕ್ಕಿಲಾಯರು ಸಂಪೂರ್ಣವಾಗಿ ಹೇಳಿದ್ದಾರೆ. ನಮ್ಮ ಮಂತ್ರಿಗಳು ಹೆಚ್ಚು ಗಮನಕೊಡುತ್ತಾರೆಂದು ನಾನು ತಿಳಿದುಕೊಂಡಿದ್ದೇನೆ. ನಮ್ಮಲ್ಲಿ ರೆಕಾರ್ಡ್ಸ್ ಆಫ್ ರೈಟ್ಸ್ ಸರಿಯಾಗಿ ಆಗಿಲ್ಲ ಎನ್ನುತಕ್ಕ ವಿಷಯ ಎಲ್ಲರಿಗೂ ತಿಳಿದುಬಂದಂತಹ ವಿಚಾರ. ರೆಕಾರ್ಡ್ಸ್ ಆಫ್ ರೈಟ್ಸ್ ಯಾರು ಬೇಸಾಯ ಮಾಡುತ್ತಿರುತ್ತಾನೆ ಅವನ ಹೆಸರಿಗೆ ಇಲ್ಲ ಎಂಬುದು ಟ್ರಿಬ್ಯೂನಲ್‌ನಲ್ಲಿ ತನಿಖೆ ಮಾಡಿದಾಗ ತಿಳಿದು ಬಂದಿದೆ. ರೆಕಾರ್ಡ್ಸ್ ಆಫ್ ರೈಟ್ಸ್‌ನಲ್ಲಿ ಉಲ್ಲೇಖ ಇಲ್ಲದೆ ಇದ್ದರೂ ಸ್ಥಳೀಯ ಪರಿಶೀಲನೆಯಿಂದ ಅವನಿಗೆ ಹಕ್ಕನ್ನು ಕೊಟ್ಟಿದೆ. ಟ್ರಿಬ್ಯೂನಲ್ ತೀರ್ಮಾನವಾದ ಮೇಲೆ ಗೇಣಿದಾರನಿಗೆ ಪಟ್ಟಾಪುಸ್ತಕ ಕೊಡುವಾಗ ಸರಿಯಾದ ಎಂಟರಿಯನ್ನು ನೋಡಬೇಕಾಗಿದೆ. ಈ ತರಹ ತೊಡಕುಗಳು ಬಂದು ನಮ್ಮ ಹೈಕೋರ್ಟ್‌ನಲ್ಲಿ ೨೮ ಸಾವಿರ ಅರ್ಜಿಗಳು ಇತ್ಯರ್ಥವಾಗದೆ ಬಾಕಿ ಇವೆ. ಟ್ರಿಬ್ಯೂನಲ್‌ನಲ್ಲಿ ತೀರ್ಮಾನವಾದರೂ ಕೂಡ ಕೆಲವರು ಹೈಕೋರ್ಟ್‌ನಲ್ಲಿ ಚಾಲೆಂಜ್ ಮಾಡಿ ಸ್ಟೇ ತರುತ್ತಾರೆ. ಕೇಸುಗಳು ತೀರ್ಮಾನವಾಗದೆ ಇನ್ನೂ ಕೆಲವು ಕಾಲ ಹಾಗೆಯೇ ಮುಂದಕ್ಕೆ ಹೋಗುತ್ತವೆ; ಅಂತಹ ಸಂದರ್ಭಗಳಲ್ಲಿ ಪಟ್ಟಾಪುಸ್ತಕ ಕೊಡುವುದನ್ನು ತಡೆ ಹಿಡಿಯಬೇಕಾಗುತ್ತದೆ. ಪಟ್ಟಾಪುಸ್ತಕ ಕೊಡುವುದರಿಂದ ಅನಾಹುತವಾಗುತ್ತದೆ. ಈ ವಿಚಾರದಲ್ಲಿ ಮಂತ್ರಿಗಳು ಗಮನಹರಿಸಬೇಕು. ಟ್ರಿಬ್ಯೂನಲ್‌ನಲ್ಲಿ ಗೇಣಿದಾರನ ಪರವಾಗಿ ತೀರ್ಮಾನ ಮಾಡಿದ್ದರೂ ಸಹ ಭೂ ಮಾಲೀಕರು ಕೋರ್ಟ್‌ನಿಂದ ಸ್ಟೇ ತರುವುದರಿಂದ ಪಟ್ಟಾ ವಿತರಣೆ ಮಾಡಲಿಕ್ಕೆ ಸಾಧ್ಯವಾಗಿಲ್ಲ. ಟ್ರಿಬ್ಯೂನಲ್ ಗೇಣಿದಾರನ ಪರವಾಗಿ ತೀರ್ಮಾನ ಮಾಡಿದರೂ ಹೈಕೋರ್ಟ್ ಗೇಣಿದಾರನ ಪರವಾಗಿದ್ದರೆ ಮಾತ್ರ ಪಟ್ಟಾಪುಸ್ತಕ ಹಂಚಲು ಸಾಧ್ಯವೆನ್ನುವ ಸಲಹೆಯನ್ನು ಮಾಡಿ, ಈಗ ಭೂಮಿಯ ಮೇಲೆ ಯಾರಿಗೆ ಹಕ್ಕು ಇದೆ ಎನ್ನುವುದನ್ನು ಗಮನದಲ್ಲಿಟ್ಟುಕೊಂಡು, ಟ್ರಿಬ್ಯೂನಲ್‌ನಲ್ಲಿ ಯಾರ ಪರವಾಗಿ ತೀರ್ಮಾನವಾಗುತ್ತದೆ ಖಾತೆದಾರರು ಯಾರು ? ಇವೆಲ್ಲವನ್ನು ಗಮನದಲ್ಲಿಟ್ಟುಕೊಂಡು ಪುನರ್ ಪರಿಶೀಲನೆಮಾಡಿ ಪಟ್ಟಾಪುಸ್ತಕ ಹಂಚುವ ವ್ಯವಸ್ಥೆ ಮಾಡಬೇಕೆಂದು ತಮ್ಮ ಗಮನಕ್ಕೆ ತರಲಿಚ್ಚಿಸುತ್ತೇನೆ.

ಶ್ರೀ ಕೆ. ಪ್ರಭಾಕರ್.—ಅಧ್ಯಕ್ಷರೆ ರೈತರಿಗೆ ಸುಲಲಿತವಾಗಿ ಸಾಲ ದೊರೆಯುವ ಉದ್ದೇಶದಿಂದ ಇರುವ ತೊಡಕನ್ನು ನಿವಾರಣೆ ಮಾಡುವುದಕ್ಕೆ ಕಳೆದವರ್ಷ ಸರ್ಕಾರದವರು ಒಂದು ಹೊಸ ಪದ್ಧತಿಯನ್ನು ಒಂದು ಸಮಗ್ರ ವಿಷಯಸೂಚಿ ರೂಪದಲ್ಲಿ ಒಂದು ಪಟ್ಟಾ ಕೊಡಬೇಕೆಂದು ಈ ಸಭೆಯಲ್ಲಿ ವಿಫಲ ಚರ್ಚೆಯಾಗಿದೆ. ಚರ್ಚಿಸಿದ ಮೂಲ ಉದ್ದೇಶವೇನೆಂದರೆ ಸಾಲ ಕೊಡತಕ್ಕ ರೀತಿಯನ್ನು ಅಮೇರಿಕಾ ದೇಶದಲ್ಲಿ ಯಾವರೀತಿಯಲ್ಲಿ ಸಾಲ ಕೊಡುತ್ತಾರೆ, ಭಾರತದಲ್ಲಿ ಯಾವರೀತಿಯಲ್ಲಿ ಸಾಲ ಕೊಡುತ್ತಾರೆ, ಕರ್ನಾಟಕದಲ್ಲಿ ಸಾಲವನ್ನು ಕೊಡಬೇಕಾದರೆ ಯಾವ ರೀತಿಯಲ್ಲಿ ಕೊಡುತ್ತಾರೆ ಅದು ಕೇಗಿದೆ ಎಂಬುದರ ಬಗ್ಗೆ ಬಾರಿ ಚರ್ಚೆಯಾಯಿತು. ಅದರ ಉದ್ದೇಶ, ಸಾಲ ದೊರೆಯಬೇಕಾದರೆ ಯಾವರೀತಿ ಮಾಡುತ್ತಾರೆ

(ಉಪಾಧ್ಯಕ್ಷರು ಪೀಠವನ್ನಲಂಕರಿಸಿದರು)

ಸಾಲ ತೆಗೆದುಕೊಳ್ಳುವಾಗ ಎಷ್ಟು ಜವಾಬ್ದಾರಿ ಇರುತ್ತದೆ, ಸಾಲವನ್ನು ತೀರಿಸುವಾಗ ಅಷ್ಟೇ ಜವಾಬ್ದಾರಿ ಸಾಲ ತೆಗೆದುಕೊಂಡವನ ಮೇಲೆ ಇರುತ್ತದೆ. ಸಾಲವನ್ನು ವಾಪಸ್ಸು ತೆಗೆದುಕೊಳ್ಳುವಾಗ ಕೊಡತಕ್ಕ ಕಿರುಕುಳ, ತೊಂದರೆ, ಇಕ್ಕಟ್ಟು ಸಾಲ ತೆಗೆದುಕೊಳ್ಳುವಾಗಲು ಇರುತ್ತದೆ. ಆ ಒಂದು ತೊಂದರೆಯನ್ನು ತಪ್ಪಿಸಬೇಕೆಂದು ಈ ಒಂದು ತೊಂದರೆಯನ್ನು ತಪ್ಪಿಸಬೇಕೆಂದು ಈ ಒಂದು ಪದ್ಧತಿಯನ್ನು ಅಂದರೆ ಪಟ್ಟಾಪುಸ್ತಕ ಹಂಚುವ ವ್ಯವಸ್ಥೆಯನ್ನು ಮಾಡಲಾಗಿದೆ. ಆ ಪುಸ್ತಕದಲ್ಲಿ ಗೌರ್ನಮೆಂಟ್ ಆಫ್ ಇಂಡಿಯಾ ಸೀಲ್, ಗೌರ್ನಮೆಂಟ್ ಆಫ್ ಕರ್ನಾಟಕ ಸೀಲುಗಳನ್ನು ಹಾಕಿದ್ದಾರೆ ಆ ಸೀಲುಗಳನ್ನು ನೋಡಿದರೆ ನನಗೆ ಅಷ್ಟೇ ಸಾಕು ಎನ್ನುವ ಗೌರವ ಮನೋಭಾವನೆ ಬರುತ್ತದೆ. ಪಟ್ಟಾವನ್ನು

ಪತಕೋಸ್ಕರ ಮಾಡಿದ್ದಾರೆಂದು ನೋಡುತಾ ಹೋದರೆ ಅದನ್ನು ಮಾಡದಿದ್ದರೆ ಲೇಸಾಗಿತ್ತೇನೋ ಎಂದೆ ನಿರಾಸೆ ಆಗಿಹೋಗುತ್ತದೆ. ಸರ್ಕಾರ ಏನೋ ಒಂದು ಉದ್ದೇಶವನ್ನು ಇಟ್ಟುಕೊಂಡು ಮಾಡಿದೆ ಎಂದು ನಾನು ಅಂದುಕೊಂಡಿದ್ದೇನೆ.

೨–೩೦ ಪಿ. ಎಂ.

ಈಗ ಸ್ಥಿರ ಆಸ್ತಿ ಎಂದರೆ ಭೂಮಿ ಮತ್ತು ಕಟ್ಟಡ ಎಂದು ಇಟ್ಟುಕೊಂಡರೆ, ರೈತರು ಬಹು ಮುಖ್ಯವಾಗಿ ಭೂಮಿಯ ಮೇಲೆ ಸಾಲ ಪಡೆಯಬೇಕಾದರೆ ಬಹಳ ತೊಡಕುಗಳಿವೆ. ಸಾಲ ಕೊಡುವವರು ಇವರನ್ನು ಬಹಳ ತೊಂದರೆಗೆ ಸಿಕ್ಕಿಸುತ್ತಾರೆ. ಇದರ ನಿವಾರಣೆ ಏನು ಎಂಬುದು ರೈತರಿಗೆ ಸರಿಯಾಗಿ ಗೊತ್ತಿರುವುದಿಲ್ಲ. ಈಗ ಇವರಿಗೆ ಸರಳವಾಗಿ ಸಾಲ ಸಿಗಬೇಕೆಂಬ ಉದ್ದೇಶ ಇಟ್ಟುಕೊಂಡು ಸರ್ಕಾರ ಈ ತಿದ್ದುಪಡಿ ತಂದಿದೆ. ಸಾಲ ಪಡೆಯಲು ರೈತರಿಗೆ ಇರುವ ತೊಡಕುಗಳು ಏನು ಎಂಬುದು ಇಲ್ಲಿ ಮುಖ್ಯವಾದುದು. ಭೂಮಿಯ ಮೇಲೆ ರೈತರಿಗೆ ಮೊದಲು ಇದ್ದ ಸಂಬಂಧ ಮತ್ತು ಈಗಿರುವ ಸಂಬಂಧ ಒಂದೇ ಆಗಿದೆ. ಇದರಲ್ಲಿ ಇಂಡೆಕ್ಸ್ ಆಫ್ ಲ್ಯಾಂಡ್, ರೆಕಾರ್ಡ್ಸ್ ಆಫ್ ರೈಟ್ಸ್ ಮತ್ತು ಪಹಣಿ ಈ ಮೂರು ಸಹ ಒದಗಿಸಲ್ಪಡಬೇಕಾಗಿ ಬರುತ್ತವೆ. ರೈತನು ಸಾಲಕ್ಕಾಗಿ ತನ್ನ ಆಸ್ತಿಯನ್ನು ಸರ್ಕಾರಕ್ಕೆ ಆಗಲೀ, ಬ್ಯಾಂಕ್‌ಗಳಿಗಾಗಲೀ ಆಥವಾ ವ್ಯಕ್ತಿಗಳಿಗಾಗಲೀ ಪರಭಾರೆ ಮಾಡುತ್ತಾನೆ. ಬ್ಯಾಂಕ್‌ಗೆ ಪರಭಾರೆ ಮಾಡಿದರೆ, ಅಲ್ಲಿ ಅವರು ಭೂಮಿಯ ಬೆಲೆಯನ್ನು ಗೊತ್ತು ಮಾಡಲು ಒಬ್ಬರು ಅಧಿಕಾರಿಯನ್ನು ಇಟ್ಟುಕೊಂಡಿರುತ್ತಾರೆ. ಅವರು ಭೂಮಿ ಬೆಲೆಯಲ್ಲಿ ಎಷ್ಟು ಭಾಗದ ಸಾಲ ಕೊಡ ಬಹುದೆಂದು ಶಿಫಾರಸ್ ಮಾಡುತ್ತಾರೆ. ರೈತನು ೫೦ ಸಾವಿರ ಕೇಳಿದರೆ, ಇವರು ೨೫ ಸಾವಿರ ಕೊಡ ಬಹುದೆಂದು ಶಿಫಾರಸ್ ಮಾಡುವುದೂ ಮಾಡಬಹುದು.ಈ ಅಧಿಕಾರಿ ಭೂಮಿಯನ್ನು ನೋಡಿ ಬೆಲೆ ಕಟ್ಟಲು ಕೂಡಲೇ ಬರುವುದಿಲ್ಲ. ಅವರನ್ನು ರೈತ ಅನೇಕ ಸಲ ಪ್ರಾರ್ಥನೆ ಮಾಡಿ ಕರೆದುಕೊಂಡು ಹೋಗಿ ತೋರಿಸಬೇಕು. ಇಲ್ಲಿ ರೈತನ ಕೆಲಸ ಏನು ಇರುವುದಿಲ್ಲ. ನನಗೆ ಇಷ್ಟು ಸಾಲ ಬೇಕು ಎಂದು ಹೇಳಿ ತೆಪ್ಪಗಿರಬೇಕು. ಬೇರೆ ವಿಷಯಗಳು ಆತನಿಗೆ ಅಪ್ರಾಪ್ತಿ ಗೊತ್ತಿರುವುದಿಲ್ಲ. ಒಂದುವೇಳೆ ರೈತ ನನ್ನು ತನ್ನ ಜಮೀನನ್ನು ಎಷ್ಟು ಬೆಲೆಗೆ ಮಾರಾಟ ಮಾಡುತ್ತೀಯೇ ಎಂದು ಕೇಳಿದರೆ ಎಕರೆಗೆ ಇಷ್ಟು ಸಾವಿರ ರೂ. ಗಳಾಗುತ್ತದೆಂದು ಹೇಳುತ್ತಾನೆ. ಇದಕ್ಕೆ ಆಧಾರವೇನೆಂದು ಕೇಳಿದರೆ, ಹತ್ತು ವರ್ಷದ ಕೆಳಗೆ ನನ್ನ ಜಮೀನನ್ನ ರಾಮೇಗೌಡ ಎಂಬಾತನು ಎಕರೆಗೆ ಇಷ್ಟು ಸಾವಿರ ಕೊಡುತ್ತೇನೆ ಕೊಡು ಎಂದು ಕೇಳಿದ್ದರು ಎಂಬ ಕಾರಣ ಕೊಡುತ್ತಾನೆ. ಹತ್ತು ವರ್ಷಗಳಿಂದೀಚೆಗೆ ಆ ಜಮೀನಿಗೆ ಬದು ಹಾಕಿದ್ದು, ಭೂಮಿ ಸಮ ಮಾಡಿದ್ದು, ಬಾವಿ ತೆಗೆಸಿದ್ದು, ಮರಗಳನ್ನು ಬೆಳೆಸಿದ್ದು ಹಾಗೂ ಆ ಭೂಮಿಯ ಪಕ್ಕದಲ್ಲಿ ರಸ್ತೆ ಆಗಿರುವುದು ಮುಂತಾದ ಅನುಕೂಲಗಳನ್ನು ಗಣನೆಗೆ ತೆಗೆದುಕೊಂಡಾಗ ಆ ಭೂಮಿಯ ಬೆಲೆ ಎಷ್ಟಾಗುತ್ತದೆಂಬುದನ್ನು ಹೇಳಲು ಆ ರೈತನಿಗೆ ತಿಳಿವಳಿಕೆ ಇರುವುದಿಲ್ಲ. ಇಷ್ಟೆಲ್ಲಾ ಅನುಕೂಲಗಳಿದ್ದರೂ ಸಹ ಬ್ಯಾಂಕ್ ಅಧಿಕಾರಿಗಳು ಸರಿಯಾದ ಬೆಲೆಯನ್ನು ಕಟ್ಟುವುದಿಲ್ಲ. ಇದು ಮೊದಲನೆಯ ಕಷ್ಟ.

ಇನ್ನು ಎರಡನೆಯ ಕಷ್ಟವೆಂದರೆ, ಬ್ಯಾಂಕ್‌ಗೆ ತನ್ನ ಜಮೀನನ್ನು ಈಡು ಮಾಡಿ ರೈತ ಸಾಲ ಪಡೆದ ನಂತರ ವಾಯಿದೆಯೊಳಗಾಗಿ ಆ ಸಾಲವನ್ನು ತೀರಿಸಿದ ಮೇಲೆ ರಿಲೀಜ್ ಬಾಂಡನ್ನು ಬ್ಯಾಂಕ್‌ನವರು ಸಲಿಕೆಸರಾ ಮಾಡಿ ಬೇಗ ವಾಪಸ್ಸು ಕೊಡುವುದಿಲ್ಲ. ಸರ್ಕಾರದಿಂದ ಸಾಲಪಡೆದು ತೀರಿಸಿದ ಮೇಲೂ ಸಹ ಇದೇ ರೀತಿ ರಿಲೀಜ್ ಬಾಂಡನ್ನು ಕೊಡುವುದಿಲ್ಲವಾದ ಕಾರಣ ರೆಕಾರ್ಡ್ ಆಫ್ ರೈಟ್ಸ್‌ನಲ್ಲಿ ಇಂತಹ ವರ್ಷದಲ್ಲಿ ಈ ಜಮೀನು ಇಂತಹ ಸಾಲಕ್ಕಾಗಿ ಈಡಾಗಿದೆ ಎಂದೇ ಬರೆದಿರುತ್ತದೆ. ಹೊಸ ಸಾಲ ಕೇಳಲು ಹೋದಾಗ ಹಿಂದಿನ ಸಾಲ ತೀರಿಲ್ಲ ಎಂದು ಹೇಳುತ್ತಾರೆ. ಆದೇ ಒಬ್ಬ ವ್ಯಕ್ತಿಯಿಂದ ಸಾಲ ಪಡೆದ ರೈತ ಅದನ್ನು ವಾಪಸ್ ಕೊಟ್ಟಮೇಲೆ, ಸಾಲದ ಪತ್ರದ ಮೇಲೆ ಹಣ ವಾಪಸ್ ಬಂದಿದೆ ಎಂದು ಷರಾ ಬರೆಸಿ ಸಾಕ್ಷಿಗಳ ರುಜು ಹಾಕಿಸುವುದು ಒಂದು ಪದ್ಧತಿ. ಆದರೆ ಕೆಲವು ಸಲ ಷರಾ ಬರೆಯುವುದೆ ಸಾಲದ ಪತ್ರವನ್ನು ಹರಿದು ಕೊಡುತ್ತಾರೆ. ಇಂತಹ ರೈತರು ಮತ್ತೆ ಸಾಲ ಕೇಳಲು ಹೋದಾಗ ಹೊಸದಾಗಿ ಸಾಲ ಕೊಡುವವರು ನೀನೇ ಪತ್ರ ಹರಿದು ತಂದಿರುಬಹುದು, ಇದರಲ್ಲಿ ಸಾಲ ವಾಪಸ್ ಮಾಡಿದ ಬಗ್ಗೆ ಷರಾ ಬರೆದಿಲ್ಲ ಎಂಬ ಕಾರಣ ಕೊಡುವುದೂ ಸಹ ಉಂಟು. ಷರಾ ಬರೆದು ಪತ್ರ ಕೊಟ್ಟರೂ ಸಹ ರೆಕಾರ್ಡ್‌ನಲ್ಲಿ ತಿದ್ದುಪಡಿ ಮಾಡಿರುವುದಿಲ್ಲ. This is mostly the crux of the problem in the meaning of our giving patta. ಇದು ಎಲ್ಲ ಹಂತದಲ್ಲಿಯೂ ರೆವಿನ್ಯೂ ಅಧಿಕಾರಿಗಳಿಗೆ ಗೊತ್ತಿದ್ದರೂ ಸಹ ರೈತನ ವಿಚಾರದಲ್ಲಿ ಮಾತ್ರ ಬಾದೆ ಎಂಬುದು ಇನ್ನೂ ಹೋಗಿಲ್ಲ. ಅದು ಇದ್ದೆ ಇದೆ.

ಇದಕ್ಕೆ ಕಾರಣವೆಂದರೆ, ತಿಳಿಯದಿರುವ ರೈತರನ್ನು ಯಾವುದಾದರೂ ಒಂದು ರೂಪದಲ್ಲಿ ಸಿಕ್ಕಿಸಿ ಅವರನ್ನು ಮತ್ತೆ ಮತ್ತೆ ನಮ್ಮ ಕಡೆಗೆ ಬರುವಂತೆ ಮಾಡುವುದೇ ಆಗಿದೆ. ಸಾಲಿನ ಅಂಟಿನಲ್ಲಿ ನೊಣ ಸಿಕ್ಕಿಕೊಂಡು ಹೊರಗೆ ಬರಲು ಯಾವ ರೀತಿ ಕಷ್ಟಪಡುತ್ತದೋ ಅದೇರೀತಿ ರೈತರು ಕಷ್ಟ ತಾಲ್ಲೂಕ್ ಮಟ್ಟದ ಕಛೇರಿಯಲ್ಲಿ ಆಸನದ ನೊಣ ನೊಂದವರಿಗೆ ತಿಳಿದು ಬಂದಿದೆ. ಶೇಕ್‌ದಾರರು, ಶಾನುಭೋಗರು ಹೀಗೆ ಎಲ್ಲರೂ ಆಸನವನ್ನು ಆಲಿಸುತ್ತಾರೆ. ಈ ಕಷ್ಟವನ್ನು ಸರ್ಕಾರದವರು ಅರಿತುಕೊಂಡು, ಈ ಗೊಂದಲವನ್ನೆಲ್ಲಾ ನಿವಾರಣೆ ಮಾಡಲು ಈ ಹೊಸ ಪಟ್ಟಿ ಕೊಡುವ ತಿದ್ದುಪಡಿ ತಂದಿದ್ದಾರೆ. ಇದು ಸಂತೋಷ ಪಡಬೇಕಾದ ವಿಷಯ. ಈ ಹಿಂದೆ ಪಟ್ಟಿ ಮಾಡಿದಾಗ ರೈತರು ಬಲಿ ಬಿದ್ದರು ಮತ್ತು ರೈತ ಪ್ರತಿನಿಧಿಗಳು ಸಹ ಬಲಿ ಬಿದ್ದರು. ಅದರಲ್ಲಿ ಯದ್ವಾತದ್ವಾ ಕಲಂಗಳನ್ನು ಹಾಕಿ ತಯಾರಿಸಿದ್ದರು. ಇದರಿಂದ Operation is a success, life is a failure ಎಂಬಂತೆ ಆಯಿತು. ಈಗ ನಮ್ಮ ದೇಶದಲ್ಲಿ ಯಾರಾದರು ಸತ್ತರೆ ಅದಕ್ಕೆ ಕಾರಣ ಕೊಡಿ ಎಂದು ನಾವು ಡಾಕ್ಟರ್‌ನ್ನು ಕೇಳುವುದಿಲ್ಲ. ಆದರೆ ಬೇರೆ ದೇಶಗಳಲ್ಲಿ ಸತ್ತವರ ಕಟುಂಬದವರಿಗೆ ಸಮಾಧಾನವಾಗುವವರೆಗೆ ಡಾಕ್ಟರ್ ಆದವರು ಕಾರಣ ಕೊಡಬೇಕು. ಇಂತಹ ಪದ್ಧತಿ ನಮ್ಮ ದೇಶದಲ್ಲಿ ಈ ಜಮೀನಿಗೆ ಸಂಬಂಧಪಟ್ಟಂತೆ ಇರಬೇಕು. ಏಕೆಂದರೆ, ಈಗ ಉತಾರಪತ್ರಿಕೆಗೆ ಬೇಳುವುದಾದರೆ, ಜಮೀನಿನ ಪಹಣಿ ಮತ್ತು ಬಾಂಡು ಸರಿಯಾಗಿರುವುದಿಲ್ಲ. ಇದರ ಒಂದು ಲೆಕ್ಕ ಸರಿಯಾಗಿರಬೇಕೆಂದು ರೆವಿನ್ಯೂ ಆಕ್ಟ್‌ನಲ್ಲಿದ್ದರೂ ಸಹ ಅದರ ಕೆಲಸ ಮಾತ್ರ ಸರಿಯಾಗಿ ನಡೆಯುತ್ತಿಲ್ಲ. ಇದರಿಂದ ಲಿಟಿಗೇಷನ್‌ಗಳು ಜಾಸ್ತಿಯಾಯಿತು ನಾನು ಮೊದಲೇ ಹೇಳಿದಂತೆ, ಒಬ್ಬ ರೈತ ಸಾಲ ಪಡೆದು ಅದನ್ನು ವಾಪಸ್ ಕೊಟ್ಟು ಹತ್ತು ವರ್ಷಗಳ ಮೇಲಾಗಿರುತ್ತದೆ. ಆದರೆ ಸೊಸೈಟಿಯವರು ರಿಲೀಫ್ ಬಾಂಡ್ ಕೊಟ್ಟಿರುವುದಿಲ್ಲ. ಈ ಮಧ್ಯೆ ಸಾಲ ಮಾಡಿ ತೀರಿಸಿದ ರೈತ ಕೂಡ ಸತ್ತಿರುತ್ತಾನೆ. ಕೆಲವು ವರ್ಷಗಳ ನಂತರ ಈ ರೈತನ ಮಗ ಸಾಲ ಕೇಳಲು ಹೋದರೆ ನಿಮ್ಮ ಅಪ್ಪ ವಿಶ್ವೇಶ್ವರಯ್ಯ ಸೊಸೈಟಿಯಲ್ಲಿ ಸಾಲ ಮಾಡಿರುವ ಕಾರಣ ಹೊಸ ಸಾಲ ಕೊಡುವುದಿಲ್ಲವೆಂದು ಹೇಳುತ್ತಾರೆ. ಹೀಗೆ ಸಾಲ ತೀರಿಸಿದ್ದರೂ ಸಹ ಕಂಬಕಂಬ ಸುತ್ತುವ ಕೆಲಸದ ಕಷ್ಟ ಸರ್ಕಾರಕ್ಕೂ ತಿಳಿದು ಈಗ ಇದನ್ನು ಪರಿಷ್ಕಾರ ಮಾಡಲು ಹೊರಟಿದ್ದಾರೆ. ಈಗ ರೈತನು ಕಂದಾಯ ಕಟ್ಟಿದರೆ ಇಂತಹ ಜಮೀನಿನ ಬಾಬ್ತು ಏಳೂವರೆ ರೂ. ಗಳ ಕಂದಾಯ ಬಾಕಿದೆ ಎಂದು ರಸೀದಿ ಕೊಡುತ್ತಾರೆಯೇ ಹೊರತು, ಅದರಲ್ಲಿ ಸರ್ವೆ ನಂಬರ್ ಮತ್ತು ಖಾತೆ ನಂಬರ್‌ನ್ನು ಬರೆಯುವುದಿಲ್ಲ. ಹಳೆಯ ಶಾನುಭೋಗರು ರೈತರಿಗೆ ಅನುಕೂಲವಾಗುವ ರೀತಿಯಲ್ಲಿ ಎಲ್ಲವನ್ನೂ ಬರೆಯುತ್ತಿದ್ದರು. ಆದರೆ ಈಗಿನ ಆಡಳಿತದಲ್ಲಿ ಈ ರೀತಿಯಿಲ್ಲಾ ಮಾಡುತ್ತಿಲ್ಲ. ಇದರಿಂದ ತೊಡಕುಗಳು ಜಾಸ್ತಿಯಾಗುತ್ತಿವೆ. ಖಾತೆಗಳಲ್ಲಿ ಒಂಟಿ ಮತ್ತು ಜಂಟಿ ಖಾತೆಗಳೆಂದು ಇರುತ್ತವೆ. ಈಗ ಉದಾಹರಣೆಗೆ ಒಬ್ಬ ತಂದೆಗೆ ೭ ಜನ ಮಕ್ಕಳಿರುತ್ತಾರೆ. ತಂದೆ ಏನಾದರು ಸತ್ತರೆ ಆತನ ಹಿರಿಯ ಮಗನ ಹೆಸರಿಗೆ ಖಾತೆ ವರ್ಗಾವಣೆಯಾಗಬೇಕಾಗುತ್ತದೆ. ಆದರೆ ಆ ೭ ಜನ ಮಕ್ಕಳಲ್ಲಿ ಏನಾದರು ಸಮಸ್ಯೆಯಿದ್ದರೆ ಖಾತೆ ಹಿರಿಯ ಮಗನ ಹೆಸರಿಗೆ ವರ್ಗವಾಗದೆ ಜಂಟಿ ಖಾತೆಯಾಗಿ ಮುಂದುವರೆಯುತ್ತದೆ. ಇಂತಹ ಸಂದರ್ಭದಲ್ಲಿ ಹಿರಿಯ ಮಗನೂ ಸಹ ಏನಾದರು ಸತ್ತರೆ ಬೇರೆ ಮಕ್ಕಳಿಗೆ ಆ ಜಮೀನಿನ ಮೇಲೆ ಸಾಲ ತೆಗೆದುಕೊಳ್ಳುವುದಕ್ಕಾಗುವುದಿಲ್ಲ. ಆದಕಾರಣ ಇಂತಹ ತೊಡಕುಗಳನ್ನೆಲ್ಲಾ ಬೇಗ ಬಗೆಹರಿಸಬೇಕು. ಇಲ್ಲಿಯವರೆಗೆ ನಾನು ಹೇಳಿದಂತೆ ವಿಚಾರಗಳನ್ನು ಮಾನ್ಯ ಮಂತ್ರಿಗಳು ಮನಸ್ಸಿನಲಿಟ್ಟುಕೊಂಡು ರೈತನಿಗೆ ಯಾವ ತೊಂದರೆಯೂ ಬರದ ರೀತಿಯಲ್ಲಿ ಅತನಿಗೆ ಕೊಡುವ ಪಟ್ಟಾವನ್ನು ತಯಾರಿಸಬೇಕು.

ಅದರಲ್ಲಿ ಸರ್ವೆ ನಂಬರ್, ಖಾತೆ ನಂಬರು ಮತ್ತು ವಿಸ್ತೀರ್ಣ ಇವುಗಳು ಸ್ಪಷ್ಟವಾಗಿ ಇರಬೇಕು. ತಮಗೆ ಹೇಳಬೇಕಾದರೆ ಖಿರಾಬುನಲ್ಲಿ ಎರಡು ತರಹ ಇದೆ. ಅದನ್ನು ಬೇಕಾದರೆ ಕಾಣುವ ಹಾಗೇ ಬೇಕಾದರೂ ಮಾಡಬಹುದು, ಕಾಣದೇ ಇರುವ ಹಾಗೆ ಬೇಕಾದರೂ ಮಾಡಬಹುದು. ಸಾಮಾನ್ಯವಾಗಿ ಅದನ್ನು ಕಾಣದೇ ಇರುವ ಹಾಗೆ ಮಾಡಿಬಿಟ್ಟು ತಕರಾರು ಬರುವಹಾಗೆ ಮಾಡಿಬಿಡುತ್ತಾರೆ. ಖಿರಾಬನ್ನು ಸ್ಪಷ್ಟವಾಗಿ ನಮೂದಿಸಲೇಬೇಕು, ಇಲ್ಲದೇ ಹೋದರೆ ಆ ಜಮೀನಿನಲ್ಲಿ ಅವರ ಖಿರಾಬು ಸೇರದೇಹೋದರೆ ಅವನಿಗೆ ಯಾವ ಸಾಲವೂ ಸಿಗುವ ಹಾಗಿಲ್ಲಾ. ಇದರಿಂದ ಎಷ್ಟೋ ರಾದ್ಧಾಂತವೂ ಕೂಡ ಆಗಲಿದೆ, ಇದು ಸರ್ಕಾರಕ್ಕೂ ಗೊತ್ತಿದೆ. ಅವನು ತನ್ನ ಜಮೀನಿನಲ್ಲಿ ಮರಗಳನ್ನು ಹಾಕಿಕೊಂಡಿರುತ್ತಾರೆ, ಆ ಜಮೀನಿನಲ್ಲಿ ಯಾವ ಯಾವ ಮರಗಳು ಇವೆ ಅದರ ಆಕಾರ ಎಷ್ಟು ಅನ್ನುವುದನ್ನು ಆ ಶ್ಯಾನುಭೋಗರು ಸರಿಯಾಗಿ ಬರೆದಿರುವುದಿಲ್ಲ. ಇದರಲ್ಲಿ ಆಕಾರ ಬರೆಯತಕ್ಕಂಥಾದ್ದು ಬಹಳ ಮುಖ್ಯವಾದುದು, ಏತಕ್ಕೆಂದರೆ ಅದರ ಮೇಲೆ ಕಂದಾಯ ವಗೈರೆ ಗೊತ್ತು ಮಾಡುತ್ತಾರೆ, ಈಗೇನೂ ೫–೧೦ ಎಕರೆ ಕಡಿಮೆ

ಇರುವವರಿಗೆ ಕಂದಾಯ ಇಲ್ಲ, ಇದನ್ನು ಬರೆಯದೇ ಹೋದರೆ ಆಕಾರ ವಿಕಾರವಾಗಿ ಕಂದಾಯ ಸಿಕ್ಕಾಬಟ್ಟೆ ಹಾಕಿಬಿಟ್ಟು ರೈತ ತೊಂದರೆಗೊಳಗಾಗುತ್ತಾನೆ. ಜೊತೆಗೆ ಈ ಒಂದು ಆಕಾರದಿಂದ ಸಾಲ ದೊರೆಯುವುದಕ್ಕೂ ತೊಂದರೆಯಾಗುತ್ತದೆ. ಆದುದರಿಂದ ನಾನು ಹೇಳುವುದೇನೆಂದರೆ ಇದನ್ನು ಸರಿಯಾಗಿ ಗುರುತಿಸಿ ಅದರ ಕಂದಾಯವನ್ನು ಸರಿಯಾಗಿ ಗೊತ್ತುಪಡಿಸಿ ಅದರ ವ್ಯಲ್ಯೂಯೇಷನ್ ಅನ್ನು ಸರಿಯಾಗಿ ಹಾಕಬೇಕು ಎಂದು ಹೇಳುತ್ತೇನೆ.

ಇನ್ನು ಜಮೀನಿನ ಪರಧಾರೆ ವಿಷಯ ಪರಭಾರೆಯಲ್ಲಿ ಕೆಲವರು ತಮ್ಮ ಜಮೀನನ್ನು ಆಧಾರ ವಾದರೂ ಮಾಡಬಹುದು, ಭೋಗ್ಯವಾದರೂ ಮಾಡಬಹುದು. ಆದರ ರಿಕಾರ್ಡ್ ಆಫ್ ರೈಟ್ಸ್‌ನಲ್ಲಿ ಸ್ಪಷ್ಟವಾಗಿರಬೇಕು. ಅದನ್ನು ಆ ಪಟ್ಟಿಯಲ್ಲಿ ಸ್ಪಷ್ಟವಾಗಿ ನಮೂದಿಸಿರಬೇಕು. ಇಲ್ಲದೇ ಹೋದರೆ ತೊಂದರೆಯಾಗುತ್ತದೆ. ತಮಗೆ ಬೇಕಾದರೆ ಒಬ್ಬ ತನ್ನ ಜಮೀನನ್ನು ಮೈಸೂರಿನಲ್ಲಿರುವವರಿಗೆ ಆಧಾರ ಹಾಕಿರುತ್ತಾನೆಂದು ಇಟ್ಟುಕೊಳ್ಳೋಣ. ಆ ಜಮೀನುದಾರ ಬೆಂಗಳೂರಿನಲ್ಲಿ ವಾಸವಾಗಿದ್ದು ತಾತ ಫೌತಿ ಆದ ನಂತರ ದೆಲ್ಲಿಗೆ ಹೋಗಿ ವಾಸ ಮಾಡುತ್ತಾನೆಂದು ಇಟ್ಟುಕೊಳ್ಳೋಣ. ಈ ರೀತಿಯಾಗಿ ಬೇಕಾದಷ್ಟು ತೊಡಕುಗಳು ಇರುತ್ತದೆ. ಇದನ್ನು ನಿವಾರಿಸುವುದಕ್ಕೋಸ್ಕರ ಒಂದು ಫೂಟ್ ನೋಟ್ ಇರಬೇಕು. ಅದಕ್ಕೆ ಒಂದು ಕಲಂ ಅನ್ನು ಸಪರೇಟ್ ಆಗಿ ಇಟ್ಟು ಆ ಕಲಂನಲ್ಲಿ ಅವನು ಆ ಜಮೀನನ್ನು ಯಾವಾಗ ಆಧಾರ ಹಾಕಿರುತ್ತಾನೆ, ಆ ಸಾಲವನ್ನು ಅವನು ತೀರಿಸಿದ್ದಾನೆಯೇ, ಒಂದು ವೇಳೆ ಆ ಸಾಲ ತೀರಿಸಿದ್ದರೆ ಅವನ ಮೇಲೆ ಏನೂ ಸಾಲ ಇಲ್ಲ ಎಂದು, ಆ ಪಟ್ಟಿಯ ಒಂದು ಕಲಂನಲ್ಲಿ ಎದ್ದು ಕಾಣುವ ಹಾಗೆ ಬರೆಯಬೇಕು. ಅಷ್ಟು ಜೆನ್ನಾಗಿ ಪಟ್ಟಿಯನ್ನು ಮೇಂಟೇನ್ ಮಾಡಿರಬೇಕು, ಹಾಗೆ ಮಾಡದೇ ಹೋದರೆ ಆ ರೈತನಿಗೆ ಶನಿಕಾಟವಾದ ಹಾಗೆ ಯಾವ ಸಾಲವೂ ಸಿಗುವುದಿಲ್ಲ. ಆದುದರಿಂದ ಆ ಪಟ್ಟಿಯಲ್ಲಿ ಸ್ಪಷ್ಟವಾಗಿ ಆ ರೈತನಿಗೆ ಆ ಜಮೀನಿನ ಮೇಲೆ ಸಾಲ ಇದೆಯೋ ಇಲ್ಲವೇ, ಎಂದು ತೀರಿಸಿದ್ದೇನೆ ಇದು ಕ್ಲಿಯರ್ ಆಗಿರುವ ಹಾಗೆ ಒಂದು ಕಲಂಅನ್ನು ಮಾಡಬೇಕು ಎಂದು ಹೇಳುತ್ತೇನೆ.

ಇನ್ನೊಂದು ಬಹು ಮುಖ್ಯವಾದ ವಿಷಯ ಎಂದರೆ ಇದನ್ನೆಲ್ಲಾ ಲೆಕ್ಕಕ್ಕೆ ತೆಗೆದುಕೊಂಡು ಅತನ ಜಮೀನಿಗೆ ಆಂದಿನ ದಿವಸ ಎಷ್ಟು ಬೆಲೆಯಾಗುತ್ತದೆ ಅನ್ನುವುದನ್ನೂ ಸಹ ನಮೂದಿಸಿರಬೇಕು. ನಾನು ಈ ಮಾತನ್ನು ಏತಕ್ಕೆ ಹೇಳುತ್ತಿದ್ದೇನೆಂದರೆ ಒಬ್ಬ ರೈತನಿಗೆ ೫ ಎಕರೆ ಜಮೀನು ಇದ್ದರೆ ಆತನಿಗೆ ೧೯೮೨ ರಲ್ಲಿ ಆ ಜಮೀನಿಗೆ ನೀವು ಎಷ್ಟು ಬೆಲೆಯನ್ನು ಕಟ್ಟಿರುತ್ತೀರೋ ಅಷ್ಟು ಬೆಲೆ ಸಾರ್ವೊದ್ಯಾರವಾಗಿ ಇರ ಬೇಕಾಗುತ್ತದೆ. ಒಂದು ವೇಳೆ ಅವನು ತನ್ನ ಜಮೀನಿನಲ್ಲಿ ಎರಡು ಥಾವಿ ತೆಗೆಸಿದ್ದರೆ, ಅದಕ್ಕೆ ೩೦–೩೦ ಸಾವಿರ ರೂಪಾಯಿ ಅನ್ನು ಖರ್ಚು ಮಾಡಿದ್ದರೆ ಅಲ್ಲಿಗೆ ೬೦ ಸಾವಿರ ರೂಪಾಯಿ ಪ್ಲಸ್ ಆ ಜಮೀನಿನ ಬೆಲೆ ಸರ್ಕಾರದವರು ಎಷ್ಟು ಹಾಕಿರುತ್ತಾರೋ ಆ ದು ಸೇರಿ ಆ ಜಮೀನಿನ ವ್ಯಾಲ್ಯೂಯೇಷನ್ ಜಾಸ್ತಿಯಾಗಬೇಕು ಎನ್ನುವುದೇ ನನ್ನ ಉದ್ದೇಶ. ತಾವು ಒಂದು ವೇಳೆ ಆ ಜಮೀನಿನ ವ್ಯಾಲ್ಯೂಯೇಷನ್ ಒಂದನ್ನು ನಿಗದಿಪಡಿಸಿದೇ ಹೋದರೆ ಆತ ಸಾಲ ಪಡೆಯಲು ಸಹಕಾರ ಸಂಘಗಳ ಮುಖಾಂತರವಾಗಲಿ ಆಥವಾ ಬ್ಯಾಂಕ್‌ಗಳ ಮುಖಾಂತರವಾಗಲಿ ಸಾಲ ತೆಗೆದುಕೊಳ್ಳಬೇಕಾದರೆ ಆತ ಅರ್ಜಿಯನ್ನು ಕೊಟ್ಟರೆ ಅದು ಮತ್ತೆ ಲೇಕ್‌ದಾರರ ಹತ್ತಿರ ಬರಬೇಕು ಅವರು ವ್ಯಾಲ್ಯೂಯೇಷನ್ ಮಾಡಬೇಕು ನಂತರ ಇವನಿಗೆ ಸಾಲ ಸಿಗಬೇಕು, ಆ ಸಾಲ ತೀರಿಹೋಗಿ ಮತ್ತೆ ಸಾಲಕ್ಕೆ ಅರ್ಜಿ ಕೊಟ್ಟರೆ ಮತ್ತೆ ಹಾಗೆಯೇ ಸುತ್ತಿಕೊಂಡು ಬರಬೇಕು. ಇಷ್ಟೆಲ್ಲಾ ತೊಂದರೆ ಇದೆ. ಇದನ್ನೆಲ್ಲಾ ತಪ್ಪಿಸಬೇಕಾದರೆ ಪಟ್ಟಾದಲ್ಲಿ ಒಂದು ಕಲಂ ಮಾಡಿ ಸ್ಪಷ್ಟವಾಗಿ ನಮೂದಿಸುವ ಹಾಗೆ ಮಾಡಬೇಕು. ಇದ್ದರೇ ಹೋದರೆ ಅವರಿಗೆ ಸಾಲ ಸಿಗುವ ತನಕ ಅದರೊಂದಿಗೆ ಯುದ್ಧ ಮಾಡಿ ಸಂಪೂರ್ಣವಾಗಿ ಓಟ್ಟಿಗೆ ಆ ಜಿಜುತ್ತಾನೆ. ಜೊತೆಗೆ ಆದರಲ್ಲಿ ಒಂದು ಥಾಪ್ಟರ್‌ಅನ್ನು ತೆರೆದು ನಾನು ಮೊದಲೇ ಹೇಳಿದ ಹಾಗೆ ಸ್ಪಷ್ಟವಾಗಿ ಆದರಲ್ಲಿ ಖಾತೆ, ಬಿರುಬು ಮತ್ತು ವಿಸ್ತರಣೆ ಇವೆಲ್ಲಾ ಕ್ಲಿಯರ್ ಆಗಿ ಬರೆದಿರುವ ಹಾಗೆ ಮಾಡಿದರೆ ಆ ರೈತನಿಗೆ ತುಂಬಾ ಸಹಾಯವಾಗುತ್ತದೆ. ಜೊತೆಗೆ ಆ ಜಮೀನಿನ ಖಾತೆ ಆದರ ಹೆಸರಿನಲ್ಲಿ ಇದೆಯೇ ಆಥವಾ ಜಾಯಿಂಟ್ ಖಾತೆಯಲ್ಲಿದೆಯೇ, ಮತ್ತು ಆಧಾರ ಭೋಗ್ಯ ಆಗಿದ್ದರೆ ಅದನ್ನು ಯಾರಿಗೆ ಪರಧಾರೆ ಮಾಡಿ ದ್ದಾನೆ, ಆದರ ಸಾಲ ತೀರಿಸಿದ್ದರೆ ಯಾವಾಗ ತೀರಿಸಿದ್ದಾನೆ ಇವಿಷ್ಟನ್ನೂ ಕೂಡ ಅದಕ್ಕೆ ಒಂದು ದೊಡ್ಡ ಚಾಪ್ಟರ್ ತೆಗೆದು ಬರೆಯುವ ಹಾಗೆ ಮಾಡಬೇಕು. ಇದರ ಜೊತೆಗೆ ಅವನಿಗೆ ಒಂದು ವೇಳೆ ನೀವು ೧೯೮೨ ರಲ್ಲಿ ಆ ಜಮೀನಿನ ವ್ಯಾಲ್ಯೂಯೇಷನ್ ಇಷ್ಟು ಎಂದು ನಮೂದಿಸಿದ್ದರೆ ಅದನ್ನೂ ಸಹ ಅದರಲ್ಲಿ ಬರೆಯುವ ಹಾಗೆ ಮಾಡಿದರೆ ಆ ರೈತನಿಗೆ ತುಂಬಾ ಅನುಕೂಲವಾಗುತ್ತದೆ. ಆ ರೈತ ಆ ಪಟ್ಟಾವನ್ನು

ಎಲ್ಲಿ ತೋರಿಸಿದರೂ ಕೂಡ ಅವನಿಗೆ ಸಾಲ ಸುಲಭವಾಗಿ ದೊರಕುವ ರೀತಿಯಲ್ಲಿ ಮಾಡಬೇಕು, ಹಾಗೆ

ಮಾಡದೇ ಏನೂ ಪ್ರಯೋಜನವಾಗಲಾರದು. ಆ ರೈತ ಏನಾದರೂ ಸಾಲ ತೆಗೆದುಕೊಳ್ಳಬೇಕಾದರೆ ಸಂಬಂಧಪಟ್ಟ ಆಫೀಸರನ್ನು ಕರೆದುಕೊಂಡು ಹೋಗುವುದಕ್ಕೆ ಟ್ಯಾಕ್ಸಿ ತರಬೇಕು, ಆ ಟ್ಯಾಕ್ಸಿ ತಂದರೂ ಕೂಡ ಆಗ ಬಾ ಈಗ ಬಾ ಎಂದು ಕಿರುಗಿಗೆ ಗೋಳು ಹುಯ್ದುಕೊಳ್ಳುತ್ತಾರೆ. ಅವರನ್ನು ಕರೆದು ಕೊಂಡು ವ್ಯಾಲ್ಯೂಯೇಷನ್ ಮಾಡಿಸದೇ ಹೋದರೆ ಅವನಿಗೆ ಸಾಲ ಸಿಗುವ ಹಾಗಿಲ್ಲ, ಈವಾಗ ಈ ತರಹ ತೊಂದರೆ ಅವನಿಗೆ ಇದೆ. ಬಹಳ ಕಷ್ಟಪಡುತ್ತಾನೆ, ಸಾಲ ತೆಗೆದುಕೊಳ್ಳುವುದಕ್ಕೆ.

ಶ್ರೀ ವೈ. ರಾವಂಕೃಷ್ಣ.—ಜಮೀನಿನ ವ್ಯಾಲ್ಯೂಯೇಷನ್ ಅನ್ನು ಯಾವ ಆಧಾರದ ಮೇಲೆ ನಮೂದಿಸಬೇಕಾಗುತ್ತದೆ. ಸರ್ಕಾರದವರು ಅದನ್ನು ಯಾವರೀತಿ ಬರೆಯಬೇಕು ಅನ್ನುವುದನ್ನು ತಿಳಿಸುತ್ತೀರಾ ?

ಶ್ರೀ ಕೆ. ಪ್ರಭಾಕರ್.—ಸ್ವಾಮಿ, ತಾವು ಈಗ ಪಟ್ಟಾ ಪುಸ್ತಕಕ್ಕೆ ೪-೫ ಹಾಳೆ ಇಟ್ಟಿದ್ದೀರಿ ಅಲ್ಲವೇ ಅಲ್ಲಿಗೆ ಒಟ್ಟು ೧೦ ಪುಟಗಳು ಆದವು. ಇನ್ನೂ ೪-೫ ಹಾಳೆ ಜಾಸ್ತಿ ಇಡಿ. ಈಗ ಇಟ್ಟಿರುವ ಹಾಗೆ ನಿಮ್ಮ ಒಂದು ದೊಡ್ಡ ಸೀಲನ್ನು ಹಾಕಿಬಿಡುತ್ತೀರಿ, ಅದನ್ನು ನೋಡಿದರೆ ಸಾಕು ಟಿಪ್ಪು ಸುಲ್ತಾನ್ ಹೆದರಿಕೊಳ್ಳಬೇಕು ಹಾಗೆ ಮೇಲೆ ನೋಡಿದರೆ ಬಹು ಚೆನ್ನಾಗಿ ಕಾಣುತ್ತದೆ, ಒಳಹೊಕ್ಕು ನೋಡಿದರೆ ಅದರಲ್ಲಿ ಏನೆ ನೂ ಇಲ್ಲ ಅದರೊಳಗೆ ಒಂದು ಖಾತೆ ನಂಬರ್ ಇಲ್ಲ, ಒಂದು ಸರ್ವೆ ನಂಬರು ಇಲ್ಲ, ಸರಿಯಾ ಒಂದು ಅಕ್ಕರ ಬರೆಗೈರೆ ಇರುವುದಿಲ್ಲ ಈಗಿನ ಪಟ್ಟಾ ಒಳಗೆ ಇಂತಹ ನ್ಯೂನತೆ ಇದೆ ಎಂದು [illegible] ಹೀಗೆ ಇರಬಾರದು ಎಂಬ ಕಾರಣಕ್ಕೆ ನಾವು ಕೆಲವಿಷ್ಟು ಸ್ವಲ್ಪ ನ್ಯೂನತೆಗಳನ್ನು ಮಾಡಿದ್ದಾರೆ. ಆದರೆ ನಾನು ಈ ಸಂದರ್ಭದಲ್ಲಿ ಹೇಳುವುದೇನೆಂದರೆ ಈ ಪಟ್ಟಾದಲ್ಲಿರುವ ಕಲಂಅನ್ನು ಸರಿಯಾಗಿ ಬರೆಯುವುದಕ್ಕೆ ಹಿಂದೆ ಅನುಭವಸ್ಥರು ಇರತಕ್ಕಂಥಾ ಹಳೇ ಶ್ಯಾನುಭೋಗರನ್ನು ಕರೆಸಿ ಸ್ವಲ್ಪ ಬರೆಸಿದರೆ ಒಳ್ಳೆಯದು ಎಂದು ಹೇಳುತ್ತೇನೆ ಹಿಂದೆ ಈ ಬಗ್ಗೆ ಫಾರಂ ನಂಬರ್ ಒಂದು, ಫಾರಂ ನಂಬರ್ ಎರಡು, ಫಾರಂ ನಂಬರ್ ಮೂರು, ಫಾರಂ ನಂಬರ್ ನಾಲ್ಕು ಈ ರೀತಿ ಇತ್ತು. ಈಗ ಪೇಜ್ ನಂಬರ್ ೧, ೨, ೩, ೪, ಅಂತ ಹಾಕಿದ್ದೀರಿ. ಪೇಜ್ ನೋಡಿದರೆ ಅದರಲ್ಲಿ ರಸವತ್ತಾದ್ದೇನೂ ಇರುವುದಿಲ್ಲ. ಆ ಜಮೀನಿನ ಆಕಾರ ಏನು ಅದರ ವ್ಯಾಲ್ಯೂಯೇಷನ್ ಏನು ಅದರ ಕಂದಾಯ ಎಷ್ಟು ವಗೈರೆ ಸ್ಪಷ್ಟವಾಗಿ ಇಲ್ಲ. ಅದನ್ನು ಯಾವ ರೀತಿ ಬರೆದಿರುತ್ತಾರೆ ನಮಗೂ ಗೊತ್ತು ನಿಮಗೂ ಗೊತ್ತು ನಾನು ಹೆಚ್ಚಿಗೆ ಹೇಳಬೇಕಾಗಿಲ್ಲವಾ. ಆದರಲ್ಲಿ ಸರಿಯಾಗಿ ವಿಸ್ತೀರ್ಣ ಹಾಕಿರುವುದಿಲ್ಲ, ಅದು ಯಾರ ಖಾತೆಯಲ್ಲಿರುತ್ತದೆ ಅಂತ ಸರಿಯಾಗಿ ಹಾಕಿರುವುದಿಲ್ಲ ಇಷ್ಟೇ ಅಲ್ಲ ಅದರಲ್ಲಿ ನೀರು ಬರುವ ಜಮೀನು ಎಷ್ಟು, ನೀರು ಬಾರದೇ ಇರುವ ಜಮೀನು ಎಷ್ಟು ವಗೈರೆ ಯಾವುದನ್ನೂ ಸರಿಯಾಗಿ ಹಾಕಿರುವುದಿಲ್ಲ. ಇವೆಲ್ಲಾ ನ್ಯೂನತೆಗಳು ಇರುವುದರಿಂದ, ಆ ಜಮೀನಿನ ಆಕಾರ, ಖರಾಬು ವಿಸ್ತೀರ್ಣ, ಖಾತೆ, ಸರ್ವೆ ನಂಬರ್, ಮತ್ತು ನೀರಿನಿಂದ ಆಗುವ ಜಮೀನಷ್ಟು, ನೀರಿನ ಆಸರೆಯಿಂದ ಆಗದೇ ಇರುವ ಜಮೀನಷ್ಟು, ಮತ್ತು ಆ ಜಮೀನಿನ ಆ ವರ್ಷದಲ್ಲಿ ನೀವು ಗೊತ್ತು ಮಾಡಿರುವ ವ್ಯಾಲ್ಯೂಯೇಷನ್ ಎಷ್ಟು, ಇವೆಲ್ಲದರ ಒಂದು ಹೋಟಲ್ ವ್ಯಾಲ್ಯೂಯೇಷನ್ ತೆಗೆದುಕೊಂಡು ಪಟ್ಟಾದಲ್ಲಿ ನಮೂದಿಸಿದರೆ ಆಗ ರೈತರಿಗೆ ಬಹಳ ಅನುಕೂಲವಾಗುತ್ತದೆ. ಇದರ ಜೊತೆಗೆ ಅವನು ಎಷ್ಟು ಎಕರೆಯಲ್ಲಿ ಭತ್ತ ಬೆಳೆಯುತ್ತಾರೆ ಎಷ್ಟು ಎಕರೆಯಲ್ಲಿ ರಾಗಿ ಬೆಳೆಯುತ್ತಾನೆ ಅವನಿಗೆ ಒಂದು ಬೆಳೆಗೆ ಎಷ್ಟು ದುಡ್ಡು ಬರುತ್ತದೆ, ಅದರಲ್ಲಿ ಒಂದು ಬೆಳೆ ಬೆಳೆಯಬಹುದೋ ಅಥವಾ ಎರಡು ಬೆಳೆ ಬೆಳೆಯಬಹುದೋ ಅವನಿಗೆ ೧೦ ಎಕರೆ ಜಮೀನಿದ್ದರೆ ಜಮೀನಿನ ವ್ಯಾಲ್ಯೂಯೇಷನ್ ಕೂಡ ಸೇರಿ ಅದು ಎಷ್ಟಾಗಬಹುದು ಅನ್ನುವುದನ್ನು ಗೊತ್ತುಪಡಿಸಿದರೆ ಆವಾಗ ಆ ರೈತನ ಸ್ಥಿತಿ ಸ್ಪಷ್ಟ ಉತ್ತಮವಾಗಬಹುದು. ನಾನು ಈ ಮಾತನ್ನು ಏತಕ್ಕೆ ಹೇಳುತ್ತಿದ್ದೇನೆಂದರೆ ೧೯೬೨ನೇ ಇಸವಿಯಲ್ಲಿ ಆತನಿಗೆ ಈ ಒಂದು ವ್ಯಾಲ್ಯೂಯೇಷನ್ ಅನ್ನು ಗೊತ್ತುಪಡಿಸಿದ್ದರೆ ೧೯೬೩ಕ್ಕೆ ಮತ್ತೆ ಅವನೇನಾದರೂ ಸಾಲ ತೆಗೆದುಕೊಳ್ಳಬೇಕಾದರೆ, ಈ ಅಂಕಿ ಅಂಶಗಳನ್ನೊಳಗೊಂಡಿರತಕ್ಕಂಥ ಪಟ್ಟಾ ಪುಸ್ತಕದ ಒಂದು ಕಲಂ ಇದ್ದರೆ ಅದನ್ನು ರಿನ್ಯೂ ಮಾಡಿದರೆ ಸಾಕು, ಆ ಸಾಲ ಕೊಡುವವರಿಗೆ ಒಂದು ಐಡಿಯಾನೂ ಬಂದ ಹಾಗೆ ಆಗುತ್ತದೆ, ಅವನು ಅದನ್ನು ರಿನ್ಯೂ ಮಾಡಿಸಿ ಹೊಸ ಸಾಲವನ್ನೂ ಸಹ ಸುಲಭವಾಗಿ ತೆಗೆದುಕೊಳ್ಳಬಹುದು, ಆ ರೈತನಿಗೆ ತುಂಬಾ ಅನುಕೂಲವಾಗುತ್ತದೆ. ಹಾಗೆ ಮಾಡದೇ ಹೋದರೆ ಏನೂ ಪ್ರಯೋಜನವಿಲ್ಲಾ. ಇಂತಹ ಒಂದು ಕಲಂ ಪಟ್ಟಾದಲ್ಲಿ ಇಟ್ಟರೆ ಒಂದು ಗೈಡ್ ಲೈನ್ಸ್ ಸಿಕ್ಕುತ್ತದೆ. ಅದನ್ನು ಮಾಡಬೇಕು. ಇಲ್ಲದೇ ಹೋದರೆ ಕಷ್ಟವಾಗುತ್ತದೆ. ನಾನು ಈ ಮಾತನ್ನು ಆ ರೈತರ ಕಷ್ಟವನ್ನು ನೋಡಲಾರದೇ ಹೇಳುತ್ತಿದ್ದೇನೆ. ಆದುದರಿಂದ ತಾವು ಈ

ಪಟ್ಟಾವನ್ನು ಸರಿಯಾಗಿ ಬರೆಸಬೇಕಾದರೆ ಅನುಭವಸ್ಥರಾದ ಹಳೆಯ ಶ್ಯಾನುಭೋಗರನ್ನು, ಪಟೇಲರನ್ನೋ ಗೌಡರನ್ನೋ ಕೆಲಸಕ್ಕೆ ತೆಗೆದುಕೊಂಡು ಬರೆಸಿದರೆ ಆ ರೈತರಿಗೆ ತುಂಬಾ ಪ್ರಯೋಜನವಾಗುತ್ತದೆ. ಈಗ ಬಹಳ ಕಷ್ಟಪಡುತ್ತಿದ್ದಾರೆ. ಇದನ್ನು ನಿವಾರಿಸಬೇಕು ಎಂದು ಹೇಳುತ್ತೇನೆ.

ಆದಕ್ಕೆ ಸಂಬಂಧಪಟ್ಟ ಹಾಗೆ ಯಾವ ಯಾವ ಗೈಡ್‌ಲೈನ್ಸ್ ಇರಬೇಕು ಎಂಬುದನ್ನು ತಾವು ತಿಳಿದುಕೊಳ್ಳಬೇಕಾದರೆ ನಮ್ಮ ರಾಜ್ಯದಲ್ಲಿ ರಿಟೈರ್ ಅಧಿಕಾರಿಗಳಿದ್ದಾರೆ ಮತ್ತು ನುರಿತಂತಹ ಶಾನುಬೋಗರಿದ್ದಾರೆ. ಅವರಿಂದ ತಾವು ಸಲಹೆಗಳನ್ನು ತೆಗೆದುಕೊಂಡು ನೊಂದಂತಹ ರೈತರಿಗೆ ಅನುಕೂಲ ಮಾಡಿಕೊಡಬೇಕೆಂದು ನಾನು ಸಲಹೆ ಮಾಡುತ್ತೇನೆ. ಇವತ್ತು ತಹಶೀಲ್ದಾರ್ ಕಛೇರಿಯಲ್ಲಿ ಯಾವುದಾದರೊಂದು ದಾಖಲೆಗಳನ್ನು ಪಡೆದುಕೊಳ್ಳಬೇಕಾದರೆ ರೈತನು ಬಹಳ ಕಷ್ಟಪಡುತ್ತಿದ್ದಾನೆ ಆದ್ದರಿಂದ ಇನ್ನು ಒಂದು ಎರಡು ಶೀಟ್ ಪೆಚ್ಚಿಗೆ ಹಾಕಿ ಪಹಣಿ ಖಾತೆ, ಕಿರಿದಿ, ಇನ್ನು ಇತರೆ ದಾಖಲೆಗಳನ್ನು ಸೇರಿಸಿ ಅನುಕೂಲ ಮಾಡಿಕೊಡಬೇಕು, ಆಗ ರೈತರ ಕಷ್ಟ ನಿವಾರಣೆಯಾಗುತ್ತದೆ, ಆಗ ನಾನು ಸಹ ನಮ್ಮ ಸರ್ಕಾರವನ್ನು ಮೆಚ್ಚುತ್ತೇನೆ. ಮತ್ತು ರೀವ್ಯಾಲ್ಯುವೇಶನ್ ಅನ್ನು ಬ್ಯಾಂಕ್‌ನವರು ಮಾಡಿದ್ದಾರೆ. ಮತ್ತು ಸಹಾಜನ್‌ರವರು ಮಾಡಿದ್ದಾರೆ. ಒಂದು ಎಕರೆಗೆ ಎಷ್ಟು ವ್ಯಾಲ್ಯುವೇಶನ್ ಎಂಬುದನ್ನು ಸರ್ಕಾರದವರು ನಿಗದಿ ಮಾಡಬೇಕು. ನಾನು ಹೇಳಿದ ಎಲ್ಲಾ ಚಾಪ್ಟರ್ಸ್ ಅಲ್ಲಿ ಇರಬೇಕು. ನೀವು ಇನ್ನು ಒಂದು ಅಥವಾ ಎರಡು ಚಾಪ್ಟರ್ ಹೆಚ್ಚು ಮಾಡಿದರೆ ಇನ್ನೂ ಒಂದು ಎರಡು ಹಾಳೆ ಜಾಸ್ತಿಯಾಗಬಹುದು ಅಷ್ಟೇ. ಇದರಿಂದ ರೈತರ ಕಷ್ಟ ನಿವಾರಣೆಯಾಗುತ್ತದೆ. ತಾವು ಏನೇನೋ ಕೆಲಸಗಳಿಗೆ ಲಕ್ಷಾಂತರ ರೂಪಾಯಿಗಳನ್ನು ಖರ್ಚು ಮಾಡಿ ರೈತರ ಮೇಲೆ ಹಾಕುತ್ತೀರಿ ಆದರೆ ಇನ್ನು ಎರಡು ಮೂರು ಪುಟಗಳನ್ನು ಮುದ್ರಿಸಲು ಎಷ್ಟು ಹಣ ಖರ್ಚಾಗುತ್ತದೆ. ಅದನ್ನು ಕೂಡ ರೈತನು ಕೊಡುವುದಕ್ಕೆ ತಯಾರಾಗಿದ್ದಾನೆ. ಆದ್ದರಿಂದ ಎಲ್ಲಾ ವಿಚಾರಗಳನ್ನು ಸಮಗ್ರವಾಗಿ ಇದರಲ್ಲಿ ಅಳವಡಿಸಬೇಕೆಂದು ನಾನು ಮಾನ್ಯ ಮಂತ್ರಿಗಳಲ್ಲಿ ವಿನಯಪೂರ್ವಕವಾಗಿ ಕೇಳಿಕೊಳ್ಳುತ್ತೇನೆ. ನಮ್ಮಲ್ಲಿ ರಿಟೈರ್ ಅಧಿಕಾರಿಗಳಿಗೆ ಏನೂ ತೊಂದರೆ ಇಲ್ಲ. ಅವರ ಸಲಹೆಯನ್ನು ಬೇಕಾದರೆ ಸರ್ಕಾರದವರು ತೆಗೆದುಕೊಳ್ಳಬಹುದು. ಅದನ್ನು ಬಿಟ್ಟರೆ ನಮ್ಮ ಸರ್ಕಾರದಲ್ಲಿಯೂ ಕೂಡ ಒಳ್ಳೆಯ ಎಮಿನೆಂಟ್ ಸೆಕ್ರೆಟರಿಗಳು ಇದ್ದಾರೆ. ಆದರೆ ಈ ಒಳ್ಳೆಯ ಕೆಲಸಗಳನ್ನು ಮಾಡಲು ಸರ್ಕಾರಕ್ಕೆ ಒಂದು ಒಳ್ಳೆಯ ಮನಸ್ಸು ಬೇಕು. ಇದನ್ನು ಮಾನ್ಯ ಕಂದಾಯ ಮಂತ್ರಿಗಳು ಮಾಡುತ್ತಾರೆ ಎಂದು ನಾನು ತಿಳಿದುಕೊಂಡಿದ್ದೇನೆ. ಮಾನ್ಯ ಮಂತ್ರಿಗಳು ಈ ಒಂದು ಒಳ್ಳೆಯ ಕೆಲಸವನ್ನು ಮಾಡಿದರೆ ಅವರ ನೆನಪು ಸದಾ ನಮ್ಮ ರಾಜ್ಯದಲ್ಲಿ ಚಿರಸ್ಥಾಯವಾಗಿ ಉಳಿಯುತ್ತದೆ ಎನ್ನುವ ಒಂದು ಮಾತನ್ನು ಕೂಡ ನಾನು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ. ನಮ್ಮ ಶ್ರೀಮಾನ್ ಸರ್. ಎಂ. ವಿಶ್ವೇಶ್ವರಯ್ಯ ನವರು ಎಂತಹ ಒಂದು ಒಳ್ಳೆಯ ಕೆಲಸಕಾರ್ಯಗಳನ್ನು ಮಾಡಿದ್ದಾರೆ ಅವರ ಜಾಣ್ಮೆಯನ್ನು ನಾವು ಎಂದಿಗೂ ಮರೆಯಲಾಗುವುದಿಲ್ಲ. ಆದ್ದರಿಂದ ಮಾನ್ಯ ಕಂದಾಯ ಮಂತ್ರಿಗಳು ಈ ಒಂದು ಒಳ್ಳೆಯ ಕೆಲಸವನ್ನು ಮಾಡಿದರೆ ರೈತರು ತಮ್ಮನ್ನು ಎಂದಿಗೂ ಮರೆಯುವುದಿಲ್ಲ. ಆದ್ದರಿಂದ ನಾನು ಹೇಳುವುದೇನೆಂದರೆ ಮಾನ್ಯ ಮಂತ್ರಿಗಳು ನಮ್ಮಲ್ಲಿರುವಂತಹ ರಸವತ್ತಾದ ಅಧಿಕಾರಿಗಳನ್ನು ಉಪಯೋಗ ಮಾಡಿಕೊಂಡು ಈ ಕೆಲಸವನ್ನು ಮಾಡುತ್ತಾರೆಂದು ನಾನು ನಂಬಿದ್ದೇನೆ. ನನಗೆ ಈ ವಿಷಯವನ್ನು ಪ್ರಸ್ತಾಪ ಮಾಡಲು ಸುಮಾರು ೨೦ ವರ್ಷಗಳಿಂದ ಅವಕಾಶ ಸಿಗಲಿಲ್ಲ. ಆದರೆ ಈ ದಿನ ಅವಕಾಶ ಸಿಕ್ಕಿದ್ದರಿಂದ ಇಷ್ಟು ವಿಷಯಗಳನ್ನು ಪ್ರಸ್ತಾಪ ಮಾಡಬೇಕಾಯಿತು ರೈತರು ತಹಶೀಲ್ದಾರ್‌ರವರ ಕಛೇರಿಯಿಂದ ಯಾವುದಾದರೂ ಪಹಣಿ ಖಾತೆ, ಕಿರಿದಿ, ಇತ್ಯಾದಿಗಳನ್ನು ತರಬೇಕಾದರೆ ಎಷ್ಟು ತೊಂದರೆಪಡುತ್ತಾನೆ ಎಂಬುದು ತಾವು ಅರ್ಥ ಮಾಡಿಕೊಳ್ಳಬೇಕು. ಮತ್ತೇ ರೈತರು ಯಾವುದಾದರೂ ಸಾಲವನ್ನು ಪಡೆಯಬೇಕಾದರೆ ಆತನಿಗೆ ಸಂಬಂಧಪಟ್ಟ ಬ್ಯಾಂಕಿನವರು ತಾವು ಇಂತಹ ದಾಖಲೆಗಳು ತರಬೇಕೆಂದು ಒಂದು ದೊಡ್ಡ ಲಿಸ್ಟ್ ಹಾಕಿ ಕೊಡುತ್ತಾರೆ. ರೈತ ಆ ಲಿಸ್ಟ್ ತೆಗೆದುಕೊಂಡು ತಹಶೀಲ್ದಾರ್‌ರವರ ಕಛೇರಿಗೆ ಎಷ್ಟು ಭಾರಿ ಹೋದರೂ ಸಹ ಆತನು ಆ ದಾಖಲೆಗಳನ್ನು ಪಡೆದುಕೊಳ್ಳುವುದಕ್ಕಾಗುವುದಿಲ್ಲ, ಆದ್ದರಿಂದ ನಾನು ಹೇಳುವುದೇನೆಂದರೆ ತಾಲ್ಲೂಕು ಆಫೀಸ್‌ಗಳು ತಮ್ಮ ಹತ್ತಿರದಲ್ಲಿಯೇ ಇರುತ್ತವೆ ಆ ಬ್ಯಾಂಕಿಗೆ ಸಂಬಂಧಪಟ್ಟ ಅಧಿಕಾರಿಗಳು ತಹಶೀಲ್ದಾರ್ ಆಫೀಸ್‌ನಿಂದ ಸಂಬಂಧಪಟ್ಟ ದಾಖಲೆಗಳನ್ನು ತರಿಸಿಕೊಂಡು Verified and certified to be correct. ಎಂದು ತಾವು ಮಾಡಿದರೆ ಅದು ನೂರಕ್ಕೆ ನೂರು ಪಾಲು ಒಳ್ಳೆಯ ಕೆಲಸವಾಗುತ್ತದೆ. ರೈತರು ತಹಶೀಲ್ದಾರ್‌ರವರ ಕಛೇರಿಗೆ ಅಲೆ

ದಾಡಂವುದು ತಪ್ಪುತ್ತದೆ. ಮತ್ತೇ Unless it is a point required to be established. ಇದರಿಂದ ಅರ್ಜಿದಾರನು ಯಾವುದೇ ಒಂದು ದಾಖಲೆಯನ್ನು ತೆಗೆದುಕೊಳ್ಳಬೇಕಾದರೆ ಆತನು ಒಂದು ಕಛೇರಿಯಿಂದ ಮತ್ತೊಂದು ಕಛೇರಿಗೆ ಹೋಗುವುದು ಮತ್ತು ಅಲೆದಾಡುವುದು ತಪ್ಪುತ್ತದೆ. ಆದ್ದರಿಂದ ತಾವು ಈ ಒಂದು ಚಾಪ್ಟರ್ ಇದರಲ್ಲಿ ಅಳವಡಿಸಿದರೆ ಒಳ್ಳೆಯದೆಂದು ನಾನು ತಿಳಿದುಕೊಂಡಿದ್ದೇನೆ. ಇದಕ್ಕೆ ಸಂಬಂಧಪಟ್ಟ ಹಾಗೆ ನಾನು ಒಂದು ಉದಾಹರಣೆಯನ್ನು ಕೊಡುತ್ತೇನೆ ತಹಶೀಲ್ದಾರ್‌ರವರ ಕಛೇರಿಯಿಂದ ತಮಗೆ ಭೂಮಿ ಮಂಜೂರಾಗಿದೆ ತಾವು ಬಂದು ಸಾಗುವಳಿ ಚೀಟಿಯನ್ನು ತೆಗೆದುಕೊಂಡು ಹೋಗಬಹುದು ಎಂದು ನೋಟೀಸ್ ಬಂದಿತ್ತು. ಆ ನಂತರ ರೈತ ತಹಶೀಲ್ದಾರ್‌ರವರ ಕಛೇರಿಗೆ ಹೋಗಿ ವಿಚಾರಿಸಿದರೆ ನಿಮ್ಮ ಊರಿನ ಶಾನುಭೋಗರನ್ನು ಕರೆದುಕೊಂಡು ಬನ್ನಿ ಎಂದು ಹೇಳಿದರು. ಆದಕ್ಕೆ ಆ ರೈತನು ಶಾನುಭೋಗರನ್ನು ಕರೆದುಕೊಂಡು ಬರುವುದಕ್ಕೆ ಕಷ್ಟವಾಗುತ್ತದೆ ಎಂದು ಹೇಳಿದರೂ ಕೂಡ ಏನೂ ಪ್ರಯೋಜನವಾಗಲಿಲ್ಲ. ನಂತರ ಆತನು ತಮ್ಮ ಮೇಲಾಧಿಕಾರಿಗಳಿಗೆ ತಿಳಿಸಿದ ನಂತರ ಅಧಿಕಾರಿಗೆ ಜುಲ್ಮಾನೆ ಆಯಿತು. ಈ ರೀತಿಯಲ್ಲಿ ಕಛೇರಿಗಳಲ್ಲಿ ಅವ್ಯವಹಾರಗಳು ನಡೆಯುತ್ತಿವೆ. ಆದ್ದರಿಂದ ಮಾನ್ಯ ಮಂತ್ರಿಗಳು ಇದನ್ನು ಅರ್ಥ ಮಾಡಿಕೊಂಡು ವ್ಯಾಲ್ಯುವೇಶನ್ ಶೀಟ್ ಒಂದು, ಖಾತೆಗೆ ಒಂದು ಶೀಟ್, ಕಿರಿದಿಗೆ ಒಂದು ಶೀಟ್, ಪಹಣಿಗೆ ಒಂದು ಶೀಟ್, ಖಾತೆ ಎಕ್ಸ್‌ಟ್ರಾಕ್ಟ್‌ಗೆ ಒಂದು ಶೀಟ್ ಇಟ್ಟು ಸಮಗ್ರವಾಗಿ ಇಟ್ಟು ರೈತರ ಕಷ್ಟವನ್ನು ನಿವಾರಣೆ ಮಾಡಬೇಕೆಂದು ನಾನು ಮನವಿ ಮಾಡಿಕೊಳ್ಳುತ್ತೇನೆ. ''ಹೋದೆ ಪಿಶಾಚಿ ಎಂದರೆ ಮತ್ತೇ ಬಂದೇ ಗವಾಕ್ಷಿಯಲ್ಲಿ'' ಎಂದ ಹಾಗೆ ಮಾಡಬಾರದು. ರೈತರ ಕಷ್ಟಗಳನ್ನು ಸಂಪೂರ್ಣವಾಗಿ ನಿವಾರಣೆ ಮಾಡಬೇಕೆಂದು ನಾನು ಹೇಳುತ್ತೇನೆ. ಮತ್ತೇ ಮತ್ತೆ ನನ್ನ ಭಾಷಣದಲ್ಲಿ ನಾನು ಕೆಲವು ಉಪಯುಕ್ತವಾದ ಸಲಹೆಗಳನ್ನು ಕೊಟ್ಟಿದ್ದೇನೆ. ಅವುಗಳನ್ನು ತಾವು ಗಣನೆಗೆ ತೆಗೆದುಕೊಂಡು ರೈತರ ಕಷ್ಟಗಳನ್ನು ನಿವಾರಣೆ ಮಾಡಬೇಕೆಂದು ನಾನು ಮತ್ತೊಮ್ಮೆ ವಿನಂತಿ ಮಾಡಿಕೊಳ್ಳುತ್ತಾ ಇಷ್ಟು ಮಾತನಾಡಲು ಅವಕಾಶವನ್ನು ಕಲ್ಪಿಸಿಕೊಟ್ಟ ಮಾನ್ಯ ಅಧ್ಯಕ್ಷರಿಗೆ ವಂದಿಸಿ ನಾನು ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ವೈ. ರಾಮಕೃಷ್ಣ (ಮಾನ್ಯ ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಖಾತೆಯ ಮಂತ್ರಿಗಳು).—ಸನ್ಮಾನ್ಯ ಅಧ್ಯಕ್ಷರೇ ಈಗ ತಂದಿರುವಂತಹ ತಿದ್ದುಪಡಿ ಮಸೂದೆಯ ಉದ್ದೇಶವನ್ನು ಎಲ್ಲಾ ಮಾನ್ಯ ಸದಸ್ಯರು ಒಪ್ಪಿದ್ದಾರೆ ಹಾಗೂ ಎಲ್ಲರೂ ಇದನ್ನು ಸ್ವಾಗತ ಮಾಡಿದ್ದಾರೆ. ಈಗ ಇರುವಂತಹ ಲ್ಯಾಂಡ್ ರೆವಿನ್ಯೂ ಕೋಡ್‌ಗೆ ಒಂದು ಹೊಸ ಸೆಕ್ಷನ್‌ನನ್ನು ಅಂದರೆ ೧೨೯ಕ್ಕೆ ೧೨೯ (ಎ) ಎಂದು ತಿದ್ದುಪಡಿ ಮಾಡಿ ಆದರಲ್ಲಿ ಪಟ್ಟಾ ಪುಸ್ತಕವನ್ನು ಒದಗಿಸಿಕೊಡಬೇಕು ಎನ್ನುವಂತಹ ವಿಚಾರವನ್ನು ನಾನು ಈಗಾಗಲೇ ಸ್ಪಷ್ಟವಾಗಿ ವಿವರಿಸಿದ್ದೇನೆ. ಮತ್ತು ಇನ್ನೂ ಕೆಲವು ಮಾನ್ಯ ಸದಸ್ಯರುಗಳಾದ ಶ್ರೀಮಾನ್ ಗಂಗಾಧರನ್‌ರವರು ಹಾಗೂ ಶ್ರೀಮಾನ್ ತಿಮ್ಮೇಗೌಡರು ಹಾಗೂ ಶ್ರೀಮಾನ್ ಪ್ರಭಾಕರ್‌ರವರು ಮಾತನಾಡುತ್ತಾ ಹೇಳಿದರು ಇದು ಬರೀ ಪುಸ್ತಕದಲ್ಲಿ ಇದ್ದರೆ ಮಾತ್ರ ಸಾಲದು ಇದನ್ನು ಅನುಷ್ಠಾನಕ್ಕೆ ತರಬೇಕು ಎನ್ನುವಂತಹ ಒಂದು ಸಲಹೆಯನ್ನು ಸಹ ಕೊಟ್ಟಿದ್ದಾರೆ. ಆದ್ದರಿಂದ ಸರ್ಕಾರ ಈ ಒಂದು ತಿದ್ದುಪಡಿ ಜಾರಿಗೆ ತಂದರೆ ಇದರ ಉದ್ದೇಶವನ್ನು ಸಂಪೂರ್ಣವಾಗಿ ಅನುಷ್ಠಾನಕ್ಕೆ ತರುತ್ತೇವೆ. ಮತ್ತೇ ಶ್ರೀಮಾನ್ ಕಕ್ಕಿಲಾಯರವರು ಮಾತನಾಡುವಾಗ ಕೆಲವು ವಿಚಾರಗಳನ್ನು ಪ್ರಸ್ತಾಪ ಮಾಡಿದರು ಅದು ಏನೆಂದರೆ ಅವರ ಹಕ್ಕುಗಳನ್ನು ಆ ಪಟ್ಟಾ ಪುಸ್ತಕದಲ್ಲಿ ನಮೂದು ಮಾಡುತ್ತೀರಾ, ಎಂದು. ಆ ರೈತ ಯಾವ ಯಾವ ಹಕ್ಕುಗಳನ್ನು ಪಡೆದಿರುತ್ತಾನೆ ಆ ಎಲ್ಲಾ ಹಕ್ಕುಗಳನ್ನು ಪಟ್ಟಾ ಪುಸ್ತಕದಲ್ಲಿ ನಮೂದು ಮಾಡಲಾಗುತ್ತದೆ. ಮತ್ತೇ ಹೈಕೋರ್ಟಿನಿಂದ ಏನಾದರೂ ಹೊಸ ಆಜ್ಞೆ ಬಂದರೆ ಅದನ್ನು ಸಹ ನಾವು ತಿದ್ದುಪಡಿ ಮಾಡಿಕೊಡಲಾಗುತ್ತದೆ. ಮತ್ತೆ ಶ್ರೀಮಾನ್ ಗಂಗಾಧರನ್‌ರವರು ಮಾತನಾಡುವಾಗ ಪ್ರಸ್ತಾಪ ಮಾಡಿದರು ಈ ಪಟ್ಟಾ ಪುಸ್ತಕದಲ್ಲಿ ಒಂದು ಫೋಟೋ ಸಹ ಇರಬೇಕೆಂದು, ಆದರೆ ಆದರ ಅವಶ್ಯಕತೆ ಎಷ್ಟರಮಟ್ಟಿಗೆ ಇದೆ ಎಂಬುದನ್ನು ಆಲೋಚನೆ ಮಾಡಿ ನಂತರ ಒಂದು ತೀರ್ಮಾನ ತೆಗೆದುಕೊಳ್ಳಲಾಗುತ್ತದೆ. ಈಗ ಸಾಲ ಪಡೆಯಬೇಕಾದರೆ ಅರ್ಜಿದಾರನ ಫೋಟೋ ಸಹ ಇರಬೇಕಾಗುತ್ತದೆ. ಆದರೆ ಮಾನ್ಯ ಸದಸ್ಯರು ಕೊಟ್ಟಿರುವ ಸಲಹೆ ಬಹಳ ಉತ್ತಮವಾದ ಸಲಹೆ. ಮತ್ತೇ ನಮ್ಮ ಮಾನ್ಯ ಸದಸ್ಯರಾದ ಶ್ರೀಮಾನ್ ಪ್ರಭಾಕರ್‌ರವರು ಮಾತನಾಡುವಾಗ ರೈತರಿಗಿಂತ ಅವರೇ ಸ್ವಂತ ಕಷ್ಟಪಟ್ಟ ಹಾಗೆ ಮಾತನಾಡಿದ್ದಾರೆ. ರೈತ ತಹಶೀಲ್ದಾರ್‌ರವರ ಕಛೇರಿಯಿಂದ ದಾಖಲೆಗಳನ್ನು ತರಬೇಕಾದರೆ ಏನೇನು ಕಷ್ಟಗಳು ಅನುಭವಿಸುತ್ತಾರೆ ಎಂಬುದನ್ನು ವಿವರಿಸಿ ಹೇಳಿದ್ದಾರೆ. ಅವರು ಹೇಳಿದ ಎಲ್ಲಾ ವಿಚಾರಗಳನ್ನು ಬೇಕಾದರೆ ನಾವು ನಮೂದಿಸಬಹುದು.

ಆದರೆ ಭೂಮಿಯ ವ್ಯಾಲ್ಯೂಯೇಶನ್ ಮಾತ್ರ ನಮೂದಿಸುವುದಕ್ಕೆ ಸಾಧ್ಯವಾಗುವುದಿಲ್ಲ. ಇದಕ್ಕೆ ಕಾರಣ ವೇನೆಂದರೆ It is the demand and supply that determine the market value of the land. ಗ್ರಾಮದಲ್ಲಿ ಸಾಮಾನ್ಯವಾಗಿ ಯಾರು ಹಣವಂತರಿರುತ್ತಾರೋ ಆ ಗ್ರಾಮದಲ್ಲಿ ಜಮೀನು ಬೆಲೆ ಜಾಸ್ತಿಯಾಗುತ್ತದೆ. ಯಾವ ಗ್ರಾಮದಲ್ಲಿ ಹಣವಂತರು ಇರುವುದಿಲ್ಲವೋ ಆ ಗ್ರಾಮದಲ್ಲಿ ಜಮೀನು ಬೆಲೆ ಕಡಿಮೆಯಾಗಿರುತ್ತದೆ. ಆದ್ದರಿಂದ ನಾವು ಭೂಮಿಯ ವ್ಯಾಲ್ಯುಯೇಶನ್ ಕಟ್ಟುವುದಕ್ಕೆ ಸಾಧ್ಯವಾಗುವುದಿಲ್ಲ. ಆದ್ದರಿಂದ ಈ ಒಂದು ಕಾಲಂನ್ನು ಈ ಪಟ್ಟಾ ಪುಸ್ತಕದಲ್ಲಿ ಆಳವಡಿಸುವುದಕ್ಕಾಗುವುದಿಲ್ಲ. ಇನ್ನು ಅನೇಕ ಜನ ಮಾನ್ಯ ಸದಸ್ಯರುಗಳು ಏನೇನು ಸಲಹೆಗಳನ್ನು ಕೊಟ್ಟಿದ್ದಾರೋ ಆ ಎಲ್ಲಾ ಸಲಹೆಗಳನ್ನು ಪರಿಶೀಲನೆ ಮಾಡುತ್ತೇನೆ. ಆದ್ದರಿಂದ ಮಾನ್ಯ ಸದಸ್ಯರು ಎಲ್ಲರೂ ಈ ಒಂದು ತಿದ್ದುಪಡಿಗೆ ಒಪ್ಪಿಗೆ ಕೊಡಲು ಕೇಳಿ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

ಶ್ರೀ ಬಿ. ಲಕ್ಷ್ಮೀಸಾಗರ್.— ಮಾನ್ಯ ಅಧ್ಯಕ್ಷರೇ ಮಾನ್ಯ ಸದಸ್ಯರಾದುತಹ ಕಕ್ಕಿಲಾಯರವರು ಕೆಲವು ವಿಷಯಗಳನ್ನು ಹೇಳಿದ್ದರು ಅವರ ಬಗ್ಗೆ ಮಾನ್ಯ ಮಂತ್ರಿಗಳು ಉತ್ತರ ಹೇಳಲಿಲ್ಲ.

ಶ್ರೀ ಪಿ. ರಾಮಕೃಷ್ಣ.—ಮಾನ್ಯ ಸದಸ್ಯರಾದ ಕಕ್ಕಿಲಾಯರವರಿಗೆ ನಾನು ಕ್ವಾರಿಫೈ ಮಾಡಿ ವಿವರವಾಗಿ ವಿಷಯವನ್ನು ತಿಳಿಸಿದ್ದೇನೆ. ಅವಕ್ಕೆ ಅವರು ಸಹ ಒಪ್ಪಿಕೊಂಡಿದ್ದಾರೆ. ಅವರು ಏನಾದರೂ ಪ್ಯೆಕೋರ್ಟಿಗೆ ಅಥೀಲ್ ಮೇಲಾದಲೆ ಅದರ ಮೇಲೆ ಯಾವ ಒಂದು ತೀರ್ಮಾನವಾಗುತ್ತದೆಯೋ ಆ ತೀರ್ಮಾನದ ಪ್ರಕಾರ ನಾವು ತಿದ್ದುಪಡಿಯನ್ನು ಸಹ ಮಾಡುತ್ತೇವೆ. ಆದ್ದರಿಂದ ಎಲ್ಲಾ ಮಾನ್ಯ ಸದಸ್ಯರು ಈ ತಿದ್ದುಪಡಿ ಮಸೂದೆಗೆ ತಮ್ಮ ಒಪ್ಪಿಗೆಯನ್ನು ಕೊಡಬೇಕೆಂದು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ಮತ್ತು ತಮ್ಮೆಲ್ಲರ ಬೆಂಬಲವೂ ಇದೆಯೆಂದು ನಂಬಿದ್ದೇನೆ.

3-00

MR. DEPUTY SPEAKER.— I will now put the consideration Motion to the vote of the House. The question is :

"That the Karnataka Land Revenue (Amendment) Bill, 1982 be taken into consideration."

The motion was adopted

CLAUSE 2 to 5

MR. DEPUTY SPEAKER. — The question is :

"That Clauses 2 to 5, both inclusive, do stand part of the Bill."

The motion was adopted

Clauses 2 to 5, both inclusive were added to the Bill.

CLAUSE 1 ETC.,

MR. DEPUTY SPEAKER.—The question is :

"That Clause 1 Long Title, The preamble and the Enacting Formula do stand part of the Bill."

The Motion was adopted

Clause 1, the Long Title, the Preamble and the enacting Farmula were added to the Bill.

MOTION TO PASS

SRI Y. RAMAKRISHNA.— Sir, I beg to move.

"That the Karnataka Land Revenue (Amendment) Bill 1982 be passed."

MR. DEPUTY SPEAKER.— The question is :

"That the Karnataka Land Revenue (Amendment) Bill 1982 be passed."

The Motion was adopted and the Bill was passed

The Karnataka Contract Carriage (Acuisition) (Amendment) Bill 1981

Motion to Consider

SRI Y. RAMAKRISHNA.—(Hon.Minister for Lsw and Parliamentary Affairs and Veterinary and animal Husbandry).— Sir, I beg to move.

"That the Karnataka Contract Carriages (Acquisition) (Amendment) Bill 1981 be taken into consideration."

The question was proposed

ಶ್ರೀ ವೈ ರಾಮಕೃಷ್ಣ.— ಸನ್ಮಾನ್ಯ ಅಧ್ಯಕ್ಷರೆ, ಈ ೧೯೭೬ರಲ್ಲಿ ಈ ಕಾಂಟ್ರಾಕ್ಟ್ ಕ್ಯಾರೇಜ್ ಕಾನೂನು ಜಾರಿಗೆ ಬಂತು. ಇದು ಜಾರಿಗೆ ಬಂದಾಗಲೇ, ಈ ಕಾನೂನನ್ನು ಜಾರಿಗೆ ತರುವಾಗ ಕೆಲವಾರು ನ್ಯೂನತೆಗಳು ಕಂಡುಬಂದವು. ಆ ನ್ಯೂನತೆಗಳನ್ನು ಸರಿಪಡಿಸುವುದಕ್ಕೋಸ್ಕರ ಈ ತಿದ್ದುಪಡಿಯನ್ನು ಇವತ್ತಿನ ದಿವಸ ಇಲ್ಲಿ ಮಂಡಿಸುತ್ತಾ ಇದ್ದೇನೆ ಮೊದಲನೆಯದಾಗಿ, ನಾಲ್ಕನೇ ಕಾಲಮ್ಮಿನ ಪ್ರಕಾರ ಈ ಒಂದು ಆರ್ಡರನ್ನು ಹೊರಡಿಸಿದ ಕೂಡಲೆ ಎಷ್ಟು ಕ್ಯಾರೇಜ್‌ಗಳು, ಬಸ್‌ಗಳು ನಮ್ಮ ಸರ್ಕಾರಕ್ಕೆ ಸಿಕ್ಕ ಬೇಕಾಗಿತ್ತೋ ಆ ಒಂದು ಆರ್ಡರ್ ಪ್ರಕಾರ ಸಂಪೂರ್ಣವಾದಂಥ ಬಸ್‌ಗಳು ಸಿಕ್ಕಲಿಲ್ಲ. ಆದರೆ ಕಾನೂನಿನ ವ್ಯಾಖ್ಯಾನ ಹೇಗಿದೆಯೆಂದರೆ. ಅಂದಿನಿಂದ ಆಯಾ ಬಸ್‌ಗಳು ಸರ್ಕಾರದ ಸ್ವತ್ತಾಗಿವೆ ಎನ್ನ ತಕ್ಕಂಥ ರೀತಿಯಲ್ಲಿ ಕಾನೂನು ರಚನೆ ಆಯಿತು. ಆದಕ್ಕಾಗಿ ಈ ಒಂದು ತಿದ್ದುಪಡಿ ಮುಖಾಂತರ ಯಾವ ಯಾವ ಬಸ್ಸುಗಳನ್ನು ನಾವು ಸ್ವಾಧೀನ ಪಡಿಸಿಕೊಂಡಿದ್ದೇವೋ ಆ ಸ್ವಾಧೀನಪಡಿಸಿಕೊಂಡಂಥ ಬಸ್ಸುಗಳಿಗೆ ಮಾತ್ರ ಈ ಒಂದು ಕಾಂಪನ್‌ಸೇಷನ್ ಕೊಡಬೇಕಾಗುತ್ತದೆ. ಆ ನೋಟೀಫಿಕೇಷನ್‌ನಲ್ಲಿ ಹೇಳಿದಹಾಗೆ, ಎಲ್ಲಾ ಕ್ಯಾರೇಜ್‌ಗಳಿಗೂ ಕೂಡ ಈ ಕಾನೂನು ಅನ್ವಯಿಸುವುದಿಲ್ಲ ಎನ್ನುವುದು ಮೊದಲನೇ ವಿಶ್ಲೇಷಣೆ. ಎರಡನೆಯದು, ೧೦ನೇ ಕಾಲಂನಲ್ಲಿ ಪರಿಹಾರ ಧನ ಏನು ನಾವು ಮಾಲೀಕರಿಗೆ,ಕೊಡಬೇಕಾಗಿದೆಯೋ ಆ ಹಣ ಈಗಿರುವ ಕಾನೂನು ಪ್ರಕಾರ ೧೦ ಸಾವಿರ ರೂಪಾಯಿಗೆ ಕಡಿಮೆ ಇದ್ದ ಪಕ್ಷಕ್ಕೆ ಸಂಪೂರ್ಣವಾಗಿ ಅವರಿಗೆ ಕೊಡಬೇಕು ಎಂದೂ, ೧೦ ಸಾವಿರ ರೂಪಾಯಿಗೆ ಮೇಲ್ಪಟ್ಟಿದ್ದರೆ ಅಂತಹ ಮಾಲೀಕರಿಗೆ ೧೦ ವರ್ಷಗಳಲ್ಲಿ, ಕಂತುಗಳಲ್ಲಿ ಹಣ ಪಾವತಿ ಮಾಡಬೇಕು ಎಂದೂ ನಿಯಮವಿದೆ. ಯಾವ ಬಡ್ಡಿ ದರದಲ್ಲಿ ವರು ಪಾವತಿ ಮಾಡಬೇಕು ಎನ್ನತಕ್ಕಂಥ ನಮೂದನೆ ಇಲ್ಲ. ಆ ನಮೂದನೆಯನ್ನು ನಾವು ಇಲ್ಲಿ ಮಾಡಿದ್ದೇವೆ. ಅದರ ಪ್ರಕಾರ ೬ ಪರ್ಸೆಂಟ್ ಬಡ್ಡಿಯನ್ನು ಸೆಕ್ಯೂರ್ಡ್ ಕ್ರೆಡಿಟರ್ಸ್‌ಗೆ ಕೊಡಬೇಕು ಎಂದು ನಾವು ತೀರ್ಮಾನ ಮಾಡಿದ್ದೇವೆ. ಅದಕ್ಕೋಸ್ಕರವಾಗಿ ಈ ಅಮೆಂಡ್‌ಮೆಂಟನ್ನು ನಾವು ತೆಗೆದುಕೊಂಡುಬಂದಿದ್ದೇವೆ. ಅದರ ತತ್ಪರಿಣಾಮವಾಗಿ, ಈಗ ಬಸ್ ಮಾಲೀಕರು ಸೆಕ್ಯೂರ್ಡ್ ಕ್ರೆಡಿಟರಿಂದ ಕಾಂಟ್ರಾಕ್ಟ್‌ಗೆ ಎಂಟರಾಗಿ ಹೆಚ್ಚಿನ ಬಡ್ಡಿ ಕೊಡಲಿಕ್ಕೆ ಅವರು ಅಗ್ರಿಮೆಂಟ್ ಬರೆದಂ ಕೊಟ್ಟಿರುತ್ತಾರೆ. ನಾವು ಗೂಡತಕ್ಕಂಥಾದ್ದು ೬ ಪರ್ಸೆಂಟ್ ಬಡ್ಡಿ ಈ ಹೆಚ್ಚಿನ ಬಡ್ಡಿಯನ್ನು ಬಸ್ ಮಾಲೀಕರಿಂದ ಅವರು ಪಡೆಯಲಿಕ್ಕೆ ಆಗುವುದಿಲ್ಲ ಎನ್ನತಕ್ಕಂಥ ಒಂದು ತಿದ್ದುಪಡಿಯನ್ನೂ ಕೂಡ ಕಾನೂನಿನಲ್ಲಿ ನಾವು ಅಳವಡಿಸಿದ್ದೇವೆ. ಇಷ್ಟು ತಿದ್ದುಪಡಿಗಳನ್ನು ನಾವು ತಂದಿದ್ದೇವೆ. ದಯವಿಟ್ಟು ಇದಕ್ಕೆ ಮಾನ್ಯತೆ ಕೊಡಬೇಕು ಎಂದು ಕೇಳಿಕೊಳ್ಳುತ್ತೇನೆ.